# ಅನಂತಪಥ

ANANTHKUMAR PRATISHTHANA

ಪುಟ 5
ನಾನು ಕಂಡಂತೆ
ಅನಂತಕುಮಾರ್
-ಡಾ ಸಿ ಎನ್ ಮಂಜುನಾಥ್




ಸಂಪುಟ - 6 ಅಕ್ಟೋಬರ್- 2025 ಸಂಚಿಕೆ - 64

## ಅಧಿಕಾರವಲ್ಲ, ಕಾರ್ಯಕರ್ತರ ವಿಶ್ವಾಸವೇ ಶಕ್ತಿ

### ಅನಂತಕುಮಾರ್‌ರ ಸಂಘಟನಾ ಕೌಶಲಗಳು




ಬಿಹಾರದ ಚುನಾವಣಾ ಸಂಚಲನವು ದೇಶದ ರಾಜಕೀಯ ವೇದಿಕೆಯಲ್ಲಿ ಮತ್ತೆ ಕೇಂದ್ರಬಿಂದುವಾಗಿರುವ ಈ ಸಮಯದಲ್ಲಿ, 'ಚುನಾವಣಾ ಚತುರ' ಎಂದು ಕರೆಸಿಕೊಂಡಿದ್ದ ಶ್ರೀ ಅನಂತಕುಮಾರ್ ಅವರ ಸಂಘಟನಾ ಕೌಶಲಗಳು ಮತ್ತು ದೂರದೃಷ್ಟಿಯ ರಾಜಕಾರಣದ ನೆನಪುಗಳು ಮರುಜೀವಂತವಾಗುತ್ತವೆ. ಕರ್ನಾಟಕದ ಜನಪರ ನಾಯಕರೆಂದು ಗುರುತಿಸಲ್ಪಟ್ಟರೂ, ಅವರು ಕೇವಲ ರಾಜ್ಯಕ್ಕೆ ಸೀಮಿತವಾಗದೆ; ಅನೇಕ ರಾಜ್ಯಗಳ ಪಕ್ಷದ ಪ್ರಭಾರಿಯಾಗಿ ಕೆಲಸ ಮಾಡಿ 'ರಾಷ್ಟ್ರದ ಸಂಘಟಕ' ಎಂಬ ಅಮರ ಗುರುತನ್ನು ಸೃಷ್ಟಿಸಿಕೊಂಡವರು. ಬಿಹಾರ, ಝಾರ್ಖಂಡ್, ಮಧ್ಯಪ್ರದೇಶ ಮತ್ತು ಉತ್ತರಪ್ರದೇಶಗಳಲ್ಲಿ ಪಕ್ಷದ ಉಸ್ತುವಾರಿಯಾಗಿ (ಪ್ರಭಾರಿ) ಅವರು ಮಾಡಿದ ಸೇವೆ, ಇಂದಿಗೂ ರಾಜಕೀಯ ಸಂಘಟನೆಯ ವಿದ್ಯಾರ್ಥಿಗಳಿಗೆ ಒಂದು ಪಠ್ಯ ಪುಸ್ತಕವಾಗಿದೆ.

**ಸಂಘಟನೆಯ ತತ್ವ: "ಸ್ಥಾನಕ್ಕಾಗಿ ಅಲ್ಲ, ರಾಷ್ಟ್ರಕ್ಕಾಗಿ ಕೆಲಸ"**

ಅನಂತಕುಮಾರ್‌ರ ಕೆಲಸದ ತತ್ತ್ವ ಸ್ಪಷ್ಟವಾಗಿತ್ತು: "ಸ್ಥಾನಕ್ಕಾಗಿ ಅಲ್ಲ, ರಾಷ್ಟ್ರಕ್ಕಾಗಿ ಕೆಲಸ." ಅವರ ಸಂಘಟನಾ ಶೈಲಿ ಅತ್ಯಂತ ವಿಶಿಷ್ಟವಾಗಿತ್ತು. ಅವರು ಹುದ್ದೆ, ಪ್ರಭಾವ, ಭಾಷೆ ಅಥವಾ ಪ್ರದೇಶದ ಗಡಿಗೆ ಬದ್ಧರಾಗದೆ, ತತ್ತ್ವ ಮತ್ತು ತ್ಯಾಗದ ರಾಜಕಾರಣವನ್ನು ಕೈಗೊಂಡು ಬದುಕಿದರು. ಇಂದಿನ ರಾಜಕೀಯದಲ್ಲಿ ಹುದ್ದೆ ಮತ್ತು ಅಧಿಕಾರವೇ ಅಂತಿಮ ಗುರಿಯಾಗಿರುವ ಸಂದರ್ಭದಲ್ಲಿ, ಅವರ ದೃಷ್ಟಿ ಸ್ಪಷ್ಟವಾಗಿತ್ತು: ಸಂಘಟನೆಯೇ ಸಾರ್ವಭೌಮತ್ವ. ಪ್ರಭಾರಿಯಾಗಿ, ಅವರು ರಾಜ್ಯದ ರಾಜಕೀಯವನ್ನು ಕೇವಲ ಚುನಾವಣಾ ಜಯ-ಪರಾಜಯದ ಚೌಕಟ್ಟಿನಲ್ಲಿ ನೋಡಲಿಲ್ಲ; ಬದಲಾಗಿ, ಬೂತ್-ಮಟ್ಟದಿಂದ ಪ್ರಾರಂಭವಾಗುವ ಸಾಂಸ್ಥಿಕ ಬಲವೇ ಶಾಶ್ವತ ಯಶಸ್ಸಿನ ರಹಸ್ಯ ಎಂದು ನಂಬಿದ್ದರು. "ಸಂಘಟನೆಗೆ ಆತ್ಮ ತುಂಬುವ ಕೆಲಸ ಕಚೇರಿಯಿಂದ ಅಲ್ಲ, ಕಣದಿಂದ ಸಾಧ್ಯ," ಎಂಬ ಅವರ ನುಡಿ, ಕಾರ್ಯಕರ್ತರ ನಡುವೆಯೇ ನಿಂತು ಕೆಲಸ ಮಾಡುವ ಅವರ ಅನನ್ಯ ಸಂಘಟನಾ ಶೈಲಿಯ ಪ್ರತಿಬಿಂಬವಾಗಿದೆ. ಅವರು ವಾದ-ವಿವಾದಕ್ಕಿಂತ 'ಸಮ್ಮತಿಯೊಂದಿಗೆ ಸೇವೆ' ಎನ್ನುವುದನ್ನು ನಂಬಿದ್ದರು. ಮಾತನಾಡುವುದಕ್ಕಿಂತ ಹೆಚ್ಚಾಗಿ ಕೇಳುವ ಅವರ ಶೈಲಿಯು ಕಾರ್ಯಕರ್ತರಿಂದ ಹಿಡಿದು ಸಚಿವರವರೆಗೆ ಎಲ್ಲರ ಮನಸ್ಸು ಗೆಲ್ಲಲು ನೆರವಾಯಿತು.

**ಬಿಹಾರ: ಅಸಾಧ್ಯವನ್ನು ಸಾಧ್ಯವಾಗಿಸಿದ ಅನಂತಕುಮಾರ್**

1990ರ ದಶಕದ ಉತ್ತರಾರ್ಧದಲ್ಲಿ ಬಿಹಾರದಲ್ಲಿ ಬಿಜೆಪಿ ಸಂಘಟನೆಗೆ ಹೊಸ ಚೈತನ್ಯ ತುಂಬುವುದು ಕಠಿಣ ಸವಾಲಾಗಿತ್ತು. ಆದರೆ, 2010ರ ವಿಧಾನಸಭಾ ಚುನಾವಣೆಯಲ್ಲಿ ಅನಂತಕುಮಾರ್ ಅವರು ಪಕ್ಷದ ಉಸ್ತುವಾರಿಯಾಗಿ ನೇಮಕಗೊಂಡಾಗ, ಆಡಳಿತ ವಿರೋಧಿ ಅಲೆ ಮತ್ತು ಮೈತ್ರಿಧರ್ಮದ ಸಂಕೀರ್ಣತೆಯನ್ನು ಯಶಸ್ವಿಯಾಗಿ ನಿಭಾಯಿಸಿದರು.

ಪುಟ 4 ರಲ್ಲಿ ಮುಂದುವರಿದಿದೆ

## ಜನನಾಯಕ ಶ್ರೀ ಅನಂತಕುಮಾರ್ ಅವರ 66ನೇ ಜನ್ಮದಿನ: 'ಅನಂತ ಸ್ಮರಣೆ ಅನಂತ ಪ್ರೇರಣೆ' ಕಾರ್ಯಕ್ರಮ ಯಶಸ್ವಿ

ಅನಂತಕುಮಾರ್ ಪ್ರತಿಷ್ಠಾನ ಮತ್ತು ಅದಮ್ಯ ಚೇತನ ಸಂಸ್ಥೆಗಳ ಜಂಟಿ ಸಹಯೋಗದಲ್ಲಿ ,ಜನನಾಯಕ ಶ್ರೀ ಅನಂತಕುಮಾರ್ ಅವರ 66ನೇ ಜನ್ಮದಿನದ ಅಂಗವಾಗಿ, ಸೆಪ್ಟೆಂಬರ್ ೨೨ ರಂದು ಬೆಂಗಳೂರಿನ ಧೋಂಡುಸಾ ಕಲ್ಯಾಣ ಮಂಟಪದಲ್ಲಿ 'ಅನಂತ ಸ್ಮರಣೆ ಅನಂತ ಪ್ರೇರಣೆ' ಎಂಬ ಸ್ಮರಣಾರ್ಥ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು

ಬೆಳಗ್ಗೆ ನಡೆದ ಸಭಾ ಕಾರ್ಯಕ್ರಮವನ್ನು ಗಣ್ಯರು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ. ವಿ. ಕೃಷ್ಣ ಭಟ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಸಂಸದರಾದ ಶ್ರೀ ಪಿ. ಸಿ. ಮೋಹನ್, ಮತ್ತು ಬಸವನಗುಡಿ ಶಾಸಕರಾದ ಶ್ರೀ ರವಿ ಸುಬ್ರಮಣ್ಯ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಆರಂಭದಲ್ಲಿ, ನೆರೆದಿದ್ದ ಎಲ್ಲಾ ಗಣ್ಯರು ಶ್ರೀ ಅನಂತಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಶ್ರೀ ಅನಂತಕುಮಾರ್ ಅವರ ಸೇವೆಯನ್ನು ಸ್ಮರಿಸುವ ಮತ್ತು ಅನಂತಕುಮಾರ್ ಅವರ ಜೀವನ ಮೌಲ್ಯಗಳನ್ನು ಸಾರುವ 'ಅನಂತ ಗೀತ ಕಥನ' ಕೃತಿಯನ್ನು ಅನಾವರಣಗೊಳಿಸಲಾಯಿತು. ಶ್ರೀ ಅನಂತಕುಮಾರ್ ಅವರ 66ನೇ ಜನ್ಮದಿನದ ಸ್ಮರಣಾರ್ಥವಾಗಿ ತಯಾರಿಸಲಾದ ಅನಂತ ಪಥ ಮಾಸ ಪತ್ರಿಕೆಯ ವಿಶೇಷ ಸಂಚಿಕೆಯನ್ನೂ ಬಿಡುಗಡೆ ಮಾಡಲಾಯಿತು.



ಸಭಾ ಕಾರ್ಯಕ್ರಮದ ನಂತರ, ಡಾ. ಪದ್ಮಿನಿ ಓಕ್ ಮತ್ತು ಶ್ರೀ ಟಿ. ಎಸ್. ಗೋಪಾಲ್ ಅವರ ನೇತೃತ್ವದ ತಂಡವು 'ಅನಂತ ಗೀತ ಕಥನ' ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಸಂಗೀತ ಕಾರ್ಯಕ್ರಮವು ಅನಂತಕುಮಾರ್ ಅವರ ಆದರ್ಶಗಳನ್ನು ಮತ್ತು ಸಾಧನೆಗಳನ್ನು ಗೀತೆಗಳ ಮೂಲಕ ಮನೋಜ್ಞವಾಗಿ ಸ್ಮರಿಸಿತು, ನೆರೆದಿದ್ದ ಎಲ್ಲರ ಮನಸ್ಸಿಗೆ ಪ್ರೇರಣೆ ನೀಡಿತು.

ಪುಟ 2 ರಲ್ಲಿ ಮುಂದುವರಿದಿದೆ







ಮಧ್ಯಾಹ್ನ ೩ ಗಂಟೆಗೆ ಅನಂತಕುಮಾರ್ ಪ್ರತಿಷ್ಠಾನದ ಮಹತ್ವದ ಹೊಸ ಉಪಕ್ರಮವಾದ ಯುವ ರಾಯಭಾರಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಈ ಉಪಕ್ರಮದ ಉದ್ದೇಶಗಳು ಮತ್ತು ಅನುಷ್ಠಾನದ ಕುರಿತು ಸಭಿಕರಿಗೆ ವಿವರವಾದ ಮಾಹಿತಿ ನೀಡಿದರು. ಇದೇ ಸಮಯದಲ್ಲಿ, ಮೈಸೂರು ರೇಡಿಯೋನಲ್ಲಿ ಬಿತ್ತರಿಸಲಾಗುತ್ತಿರುವ ಅದಮ್ಯ ಕರ್ನಾಟಕದ ದೇವಾಲಯಗಳನ್ನು ಕುರಿತು ರಚಿಸಿದ 'ಭವ್ಯಶಿಲ್ಪದ ದಿವ್ಯಪಥ' ಎಂಬ ಪುಸ್ತಕವೂ ಬಿಡುಗಡೆಗೊಂಡಿತು.

ಸಂಜೆ ೪ ಗಂಟೆಗೆ ಆರಂಭವಾದ ನುಡಿ ನಮನ ಗೋಷ್ಠಿಯಲ್ಲಿ ಸಂಸದರಾದ ಡಾ. ಮಂಜುನಾಥ್ ಅವರು ಭಾಗವಹಿಸಿ, ಶ್ರೀ ಅನಂತಕುಮಾರ್ ಅವರೊಂದಿಗಿನ ತಮ್ಮ ಒಡನಾಟವನ್ನು ಮತ್ತು ಅವರ ಸಾರ್ವಜನಿಕ ಜೀವನದ ಬದ್ಧತೆಯನ್ನು ಸ್ಮರಿಸಿದರು. ಜೊತೆಗೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ನೇತೃತ್ವದ 'ಅದಮ್ಯ ಚೇತನ' ಸಂಸ್ಥೆಯ ಸಮಾಜಮುಖಿ ಕಾರ್ಯಗಳನ್ನು ಮುಕ್ತವಾಗಿ ಶ್ಲಾಘಿಸಿದರು.

ಪರಿಸರ ಸಂರಕ್ಷಣೆಯ ಹಾದಿಯಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಾಗಿ, ಅದಮ್ಯ ಚೇತನದ ಜನಪ್ರಿಯ 'ಪ್ಲೇಟ್ ಬ್ಯಾಂಕ್' ಉಪಕ್ರಮದ ನಾಲ್ಕು ಹೊಸ ಶಾಖೆಗಳು — ಬಾಗಲಕೋಟೆ, ವಿಜಯಪುರ, ಮುಧೋಳ ಮತ್ತು ಪಶ್ಚಿಮ ಘಟ್ಟದಲ್ಲಿರುವ ಹೊಸನಗರಗಳಲ್ಲಿ ಇದೇ ಸಂದರ್ಭದಲ್ಲಿ ಉದ್ಘಾಟಿಸಲಾಯಿತು.

ಕಾರ್ಯಕ್ರಮದಾದ್ಯಂತ, ಶ್ರೀ ಅನಂತಕುಮಾರ್ ಅವರ ಆತ್ಮೀಯ ಒಡನಾಡಿಗಳು ಅವರ ವ್ಯಕ್ತಿತ್ವ, ನಾಯಕತ್ವದ ಗುಣಗಳು ಮತ್ತು ಸಾರ್ವಜನಿಕ ಕಾರ್ಯವೈಖರಿಯ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಅಪಾರ ಸಂಖ್ಯೆಯ ಅಭಿಮಾನಿಗಳು ಮತ್ತು ಹಿತೈಷಿಗಳು ಭಾಗವಹಿಸಿ, ಈ ಸ್ಮರಣಾರ್ಥ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಅನಂತಕುಮಾರ್ ಪ್ರತಿಷ್ಠಾನದ ಹೊಸ ಹೆಜ್ಜೆ: ಯುವಶಕ್ತಿಗೆ ದಿಕ್ಸೂಚಿ - 'ಯುವ ರಾಯಭಾರಿ' ಯೋಜನೆ

ನವ ಪೀಳಿಗೆಯಲ್ಲಿ ಪರಿಸರ ಪ್ರಜ್ಞೆ, ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರೀಯ ಹೆಮ್ಮೆಯ ಮೌಲ್ಯಗಳನ್ನು ಬಿತ್ತುವ ಮಹತ್ವಾಕಾಂಕ್ಷೆಯೊಂದಿಗೆ, ಅನಂತಕುಮಾರ್ ಪ್ರತಿಷ್ಠಾನವು ''ಯುವ ರಾಯಭಾರಿಗಳ ಉಪಕ್ರಮ'(Youth Ambassadors Initiative) ವನ್ನು ಸೆಪ್ಟೆಂಬರ್ 22 ರಂದು ಉದ್ಘಾಟಿಸಲಾಯಿತು. ಇದು ಕೇವಲ ತರಬೇತಿ ಕಾರ್ಯಕ್ರಮವಲ್ಲ, ಬದಲಿಗೆ ರಾಷ್ಟ್ರ ನಿರ್ಮಾಣದ ದೂರದೃಷ್ಟಿಯ ಹೆಜ್ಜೆಯಾಗಿದೆ



**ಯೋಜನೆಯ ಹಿನ್ನೆಲೆ**

ಇಂದಿನ ಭಾರತವು ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ ಮತ್ತು ರಾಷ್ಟ್ರೀಯ ಹೆಮ್ಮೆಯ ಮೌಲ್ಯಗಳನ್ನು ಪ್ರತಿ ಪೀಳಿಗೆಗೆ ವರ್ಗಾಯಿಸಬೇಕಾದ ಮಹತ್ವದ ಹಂತದಲ್ಲಿದೆ. ಮಕ್ಕಳ ಬೆಳವಣಿಗೆಯ ಅವಧಿಯು ಅತ್ಯಂತ ಸೂಕ್ಷ್ಮ ಮತ್ತು ಪ್ರಭಾವಶಾಲಿಯಾಗಿರುತ್ತದೆ. ಈ ಚಿಕ್ಕ ವಯಸ್ಸಿನಲ್ಲಿ ಸರಿಯಾದ ಮೌಲ್ಯಾಧಾರಿತ ಶಿಕ್ಷಣ ನೀಡಿದರೆ, ಆ ಮೌಲ್ಯಗಳು ಅವರ ಕುಟುಂಬ, ಸ್ನೇಹಿತರು ಮತ್ತು ನೆರೆಹೊರೆಯವರ ಮೇಲೆ ಸಕಾರಾತ್ಮಕವಾಗಿ ದೊಡ್ಡ ಪರಿಣಾಮ ಬೀರುತ್ತವೆ. ಈ ದೃಷ್ಟಿಯಿಂದ, ಅನಂತಕುಮಾರ್ ಪ್ರತಿಷ್ಠಾನವು ಯುವ ರಾಯಭಾರಿಗಳ ಉಪಕ್ರಮವನ್ನು ಸಿದ್ಧಪಡಿಸಿದೆ. ಇದು ಶಾಲೆಯ ಪಠ್ಯಕ್ರಮದ ಕಲಿಕೆಗೆ ಮೌಲ್ಯ ಆಧಾರಿತ ಪ್ರಾಯೋಗಿಕ ಜ್ಞಾನದ ಸ್ಪರ್ಶವನ್ನು ನೀಡುತ್ತದೆ. ಈ ಕಾರ್ಯಕ್ರಮದ ಮೂಲಕ ಮಕ್ಕಳು ಸಮಾಜದ ಆದರ್ಶ ವ್ಯಕ್ತಿಗಳ ಮಾರ್ಗದರ್ಶನ ಪಡೆಯುತ್ತಾರೆ ಮತ್ತು ಪರಿಸರ ಸ್ನೇಹಿ ನಡವಳಿಕೆಯನ್ನು ಅಭ್ಯಾಸಗೊಳಿಸುತ್ತಾರೆ ಹಾಗೂ ತಮ್ಮ ಶಾಲೆಯ ಸಹಪಾಠಿಗಳಿಗೆ ಪ್ರೇರಣೆ ನೀಡುವ ನಾಯಕರಾಗುತ್ತಾರೆ.

**ತರಬೇತಿಯ ವಿನ್ಯಾಸ**

ಪ್ರಾಯೋಗಿಕವಾಗಿ ಅದಮ್ಯ ಚೇತನ ಸಂಸ್ಥೆ ಬೆಂಗಳೂರಿನ ಮಧ್ಯಾಹ್ನದ ಬಿಸಿ ಊಟ ಯೋಜನೆಯಡಿಯಲ್ಲಿ ಬರುವ 30ಶಾಲೆಗಳಿಂದ ತಲಾ ಇಬ್ಬರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಒಟ್ಟು 60 ಯುವ ರಾಯಭಾರಿಗಳು. ಇವರಿಗೆ ಎರಡು ವರ್ಷಗಳಲ್ಲಿ 12 ತರಬೇತಿ ಅಭ್ಯಾಸಗಳನ್ನು ನೀಡಲಾಗುತ್ತದೆ — ಮೊದಲ ವರ್ಷದಲ್ಲಿ 5 ಮತ್ತು ಎರಡನೇ ವರ್ಷದಲ್ಲಿ 7 ತರಬೇತಿಯಲ್ಲಿ ತರಗತಿ ಚರ್ಚೆಗಳು, ಕ್ಷೇತ್ರ ಭೇಟಿಗಳು, ಮಾದರಿ ವ್ಯಕ್ತಿಗಳೊಂದಿಗೆ ಸಂವಾದ ಮತ್ತು ಮಾರ್ಗದರ್ಶನ ಈ ಉಪಕ್ರಮದಲ್ಲಿ ಇರಲಿವೆ.

ಯುವ ರಾಯಭಾರಿಗಳ ಉಪಕ್ರಮವು, ಕೇವಲ ಒಂದು ತರಬೇತಿ ಕಾರ್ಯಕ್ರಮವಾಗಿರದೆ, ಅದು ಅನಂತಕುಮಾರ್ ಪ್ರತಿಷ್ಠಾನವು ರಾಷ್ಟ್ರ ನಿರ್ಮಾಣದತ್ತ ಇಟ್ಟಿರುವ ಮಹತ್ವದ ಹೆಜ್ಜೆಯಾಗಿದೆ. ಪರಿಸರ ಪ್ರಜ್ಞೆ, ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರೀಯ ಹೆಮ್ಮೆಯ ಮೌಲ್ಯಗಳನ್ನು ಮಕ್ಕಳಲ್ಲಿ ಬಿತ್ತುವ ಮೂಲಕ, ಈ ಯೋಜನೆಯು ನಾಳಿನ ನಾಯಕರಿಗೆ ಅಡಿಪಾಯ ಹಾಕುತ್ತಿದೆ. ಅದಮ್ಯ ಚೇತನದ ಸಹಯೋಗದೊಂದಿಗೆ 30 ಶಾಲೆಗಳ 60 ವಿದ್ಯಾರ್ಥಿಗಳಿಗೆ ಎರಡು ವರ್ಷಗಳ ಅವಧಿಯಲ್ಲಿ ನೀಡುವ ಈ ಪ್ರಾಯೋಗಿಕ ಹಾಗೂ ಮೌಲ್ಯಾಧಾರಿತ ಕಲಿಕೆಯು, ಮಕ್ಕಳನ್ನು ಕೇವಲ ವಿದ್ಯಾರ್ಥಿಗಳನ್ನಾಗಿ ಮಾಡದೆ, ಅದಮ್ಯ ಚೇತನದ ಪರಿಸರ ಮತ್ತು ಸಮಾಜ ಕಾಳಜಿಯ ಉಪಕ್ರಮಗಳು ಹಾಗೂ ಸಂದೇಶಗಳನ್ನು ವಿದ್ಯಾರ್ಥಿಗಳು ಶಾಲೆಗೆ ಮತ್ತು ಮನೆಗೆ ಕೊಂಡೊಯ್ಯುತ್ತಾರೆ. ಈ ಮೌಲ್ಯಗಳನ್ನು ವೈಯಕ್ತಿಕವಾಗಿ ಅನುಸರಿಸುವುದರ ಜೊತೆಗೆ, ತಮ್ಮ ಸಹಪಾಠಿಗಳು, ಶಿಕ್ಷಕರು ಮತ್ತು ಕುಟುಂಬ ಸದಸ್ಯರನ್ನು ಪ್ರಭಾವಿತರನ್ನಾಗಿಸುವುದು ಈ ರಾಯಭಾರಿಗಳ ಜವಾಬ್ದಾರಿಯಾಗಿರುತ್ತದೆ."

ಶ್ರೀ ಅನಂತಕುಮಾರ್ ಅವರ "ಜನಸೇವೆಯ ಮೂಲಕ ರಾಷ್ಟ್ರ ಸೇವೆ" ಎಂಬ ಆದರ್ಶವನ್ನು ಮುಂದುವರಿಸುತ್ತಾ, ಈ ಉಪಕ್ರಮವು ಇಂದಿನ ಮಕ್ಕಳಲ್ಲಿ ನಾಯಕತ್ವದ ಗುಣಗಳನ್ನು ಮತ್ತು ಮೌಲ್ಯಗಳನ್ನು ತುಂಬಿ, ಬಲಿಷ್ಠ ಭಾರತದ ನಿರ್ಮಾಣಕ್ಕೆ ದಾರಿದೀಪವಾಗಲಿದೆ.

ಅನಂತಯಾನ
ನಿರೂಪಣೆ : ಟಿ.ಎಸ್. ಗೋಪಾಲ್

# ಗೆಳೆಯನಿಂದ ಪ್ರೋಸ್ಟ್ ಪಡೆದುಕೊಂಡ ಎಳೆಯ

## ಜಗ ಮೆಚ್ಚುವಂತೆ ಕೊನೆಯ ಉಸಿರಿನವರೆಗೆ ಜವಾಬ್ದಾರಿ ನಿರ್ವಹಿಸಿದ ಧೀರ

೧೯೭೭. ಎಂಟಿಎಸ್ ಕಾಲೊನಿಯ ಎದುರಿನ ಮೈದಾನದಲ್ಲಿ ಹಲವರು ಕಾಲೇಜು ಯುವಕರು ಕ್ರಿಕೆಟ್ ಆಡುತ್ತಿದ್ದಾರೆ. ನೋಡುತ್ತ ನಿಂತವರು ಇನ್ನು ಕೆಲವರು. ಅವರಲ್ಲೊಬ್ಬ ಪ್ರೇಕ್ಷಕ ಆಗಿಂದಾಗ್ಗೆ ಆಟದ ಬಿಡುವಿನಲ್ಲಿ ತನ್ನ ಗೆಳೆಯ ವಿಕೆಟ್ ಕೀಪರನನ್ನು ಮಾತಿಗೆಳೆಯುತ್ತಿದ್ದಾನೆ. ಬಹುಶಃ ಆಟ ಬಿಟ್ಟು ತನ್ನೊಡನೆ ಬರುವಂತೆ ಗೆಳೆಯನನ್ನು ಅನುನಯದಲ್ಲಿ ಒಲಿಸಲು ಪ್ರಯತ್ನಿಸುವಂತೆ ತೋರುತ್ತಿದೆ. ಆದರೆ, ಆ ವಿಕೆಟ್ ಕೀಪರ್ ಆಟವನ್ನು ಬಿಟ್ಟು ಹೊರಡಲು ಮನಸ್ಸು ಮಾಡುತ್ತಿಲ್ಲ. ಸ್ನೇಹಿತನ ಆಹ್ವಾನವನ್ನು ನಿರಾಕರಿಸುತ್ತಿದ್ದಾನೆ. ಆಟ ಮುಗಿದ ಬಳಿಕ ಇವರ ಮಾತುಕತೆ ಮುಂದುವರಿದಿದ್ದು ಹೀಗೆ:

"ನಾ ಯಾಕ ಬರಬೇಕು ಹೇಳು" ಕ್ರಿಕೆಟ್ ಆಟಗಾರ ಗೆಳೆಯನನ್ನು ಕೇಳಿದ.
"ಯಾಕಂದ್ರ ನಾಳೆ ಬೈಠಕ್ ಅದ, ಪರಿಷತ್ತಿನ ಮುಂದಿನ ಕಾರ್ಯಕ್ರಮ ಏನು ಮಾಡೂದು, ಚಟುವಟಿಕೆ ಅದೂ ಇದೂ ಚರ್ಚೆ ಮಾಡೂದದ"
" ಅದು ನೀವ್ ಮಾಡೂ ಕೆಲಸ, ನಾನ್ಯಾಕೆ?"

" ನೀನೂ ನಮ್ಮ ಗುಂಪಿನೊಳಗ ಒಬ್ಬಾಂವ ಅಂದಮ್ಯಾಲ ನೀನೂ ಬರಲಿಕ್ಕೇ ಬೇಕಲ್ಲ.."

" ನೋಡಪಾ, ನೀನೇನೋ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅಂತ ಹುದ್ದೆ ವಹಿಸಿಕೊಂಡಿದ್ದೀ. ಅಂದಮ್ಯಾಲ ಕೆಲಸ ಮಾಡು, ಅಲ್ಲಿಗೆ ಬರಲಿಕ್ಕೆ ನಾನೇನು ಪರಿಷತ್ತಿಗೆ ಅಧ್ಯಕ್ಷನಾ?"

"ಕಾರ್ಯಕರ್ತಹೌದಲ್ಲ!"

"ನೀ ಹತ್ತು ಜನರ ಹಾಂಗ ಕಾರ್ಯಕರ್ತ ಇದ್ದೀ, ಕೆಲಸ ಮಾಡಲಿಕ್ಕೆ ಬಾ ಅಂದ್ರ ನಾ ಬರಾಂಗಿಲ್ಲ. ನನಗೇನರೆ ಜವಾಬ್ದಾರಿ ಕೊಡು, ಬರ್ತೀನಿ"

"ಏನು ಜವಾಬ್ದಾರಿ ಕೊಡೋದೋ ಮಹಾರಾಯ, ವಿದ್ಯಾರ್ಥಿಯನ್ನ ಅಧ್ಯಕ್ಷ ಮಾಡಲಿಕ್ಕ ಬರ್ತದೇನು? "

"ಅಧ್ಯಕ್ಷ ಆಗೋದೇ ಜವಾಬ್ದಾರಿ ಅಂತ ನಾ ಎಲ್ಲಿ ಹೇಳಿದೆ? ಕಾರ್ಯದರ್ಶಿ ಆಗಬಹುದಲ್ಲ"

"ಇನಾಂದಾರ್ ಈಗ ಕಾರ್ಯದರ್ಶಿ ಆಗ್ಯಾನಲ್ಲ, ಮುಂದಿನ ವರ್ಷ ಅವನ ಇಂಜಿನಿಯರಿಂಗ್ ಕೋರ್ಸ್ ಮುಗೀತದ. ಆಮ್ಯಾಲೆ ನೀನೇ ಕಾರ್ಯದರ್ಶಿ ಆಯಿತಿಲ್ಲೋ ಈಗ ನನ್ನ ಜೊತೆಗೆ ಬಾ"

"ಆಗ್ಲೇ ಹೇಳಿದೆನಲ್ಲ, ನನಗ ಒಂದು ಜವಾಬ್ದಾರಿ ಕೆಲಸ ಕೊಡೂದಾದ್ರ ಬರ್ತೀನಿ ಅಂತ"
"ಮುಂದಿನ ವರ್ಷ ಕಾರ್ಯದರ್ಶಿ ನೀನೇ ಅಂತ ಹೇಳಿದೆನಲ್ಲ"

"ಈಗ ಜಂಟಿ ಕಾರ್ಯದರ್ಶಿ ಆಗೀಯಂತ, ಬಾರೋ ಮಾರಾಯ"


ಈ ಸಂಭಾಷಣೆ ನಡೆದದ್ದು ಇಬ್ಬರು ಆತ್ಮೀಯ ಗೆಳೆಯರ ನಡುವೆ. ವಿಕೆಟ್ ಕೀಪರ್ ಆಗಿ ಕ್ರಿಕೆಟ್ ಆಡುತ್ತಿದ್ದ ಕಾಲೇಜು ಹುಡುಗ ಅನಂತಕುಮಾರ್. ಆತನಿಗೆ ವಿದ್ಯಾರ್ಥಿ ಪರಿಷತ್ತಿನ ಜಂಟಿ ಕಾರ್ಯದರ್ಶಿಯ ಹುದ್ದೆ ವಹಿಸಿ ಸಂಘಟನೆಗೆ ಬರುವಂತೆ ಒತ್ತಾಯಿಸಿದ ಹುಬ್ಬಳ್ಳಿಯ ಗೆಳೆಯ ಅಚ್ಯುತ ಲಿಮಯೆ.

ಅನಂತಕುಮಾರನಲ್ಲಿದ್ದ ನಾಯಕತ್ವದ ಗುಣಗಳನ್ನೂ, ಕಾರ್ಯಕುಶಲತೆ, ಕರ್ತವ್ಯಶ್ರದ್ಧೆಗಳನ್ನೂ ಗುರುತಿಸಿ ಆತನನ್ನು ಸಂಘಟನಾಕಾರ್ಯದಲ್ಲಿ ತೊಡಗಿಸುವ ಪ್ರೇರಣೆ ನೀಡಿದವರಲ್ಲಿ ಅಚ್ಯುತ ಲಿಮಯೇ ಪಾತ್ರ ಮಹತ್ವದ್ದು.

೧೯೭೫ ಡಿಸೆಂಬರ್. ಸತ್ಯಾಗ್ರಹ ಹೋರಾಟಕ್ಕಾಗಿ ಯುವಕರ ತಂಡಗಳನ್ನು ರೂಪಿಸುವ ಹೊಣೆಯನ್ನು ನರಹರಿ ಫಡಕೆಯವರಿಗೆ ವಹಿಸಲಾಗಿತ್ತು. ಹೀಗೆ ಆಯ್ಕೆಯಾದ ಹದಿನಾಲ್ಕು ಜನರ ಒಂದು ತಂಡದಲ್ಲಿ ಏಳು ಜನ ಸೈನ್ಸ್ ಕಾಲೇಜಿನವರು; ಇನ್ನುಳಿದ ಏಳು ಮಂದಿ ಕಾಮರ್ಸ್ ಕಾಲೇಜಿನವರು. ಪಿ.ಸಿ. ಜಾಬಿನ್ ಸೈನ್ಸ್ ಕಾಲೇಜಿನಿಂದ ಬಂದವರಲ್ಲಿ ದ್ವಿತೀಯ ಪಿಯುಸಿಯ ವಿಷ್ಣುಕಾಂತ ಚಟಪಲ್ಲಿ, ಪ್ರದೀಪ್ ಮುಜುಂದಾರ, ಅಚ್ಯುತ ಲಿಮಯೆ ಜೊತೆಗೆ ಪ್ರಥಮ ಪಿಯುಸಿಯ ಅನಂತಕುಮಾರ ಇವರೆಲ್ಲ ಇದ್ದರು.

ಡಿಸೆಂಬರ್ ೮ನೇ ತಾರೀಕಿನಂದು ಸತ್ಯಾಗ್ರಹ ನಿಗದಿಯಾಗಿದ್ದ ದಿನ. ಈ ತಂಡದವರನ್ನೆಲ್ಲ ಪೋಲೀಸರು ಬಂಧಿಸಿ ಸೆರೆಮನೆಗೆ ಕಳುಹಿಸಿದರು. ಮೂವತ್ತೆಂಟು ದಿನಗಳ ಸೆರೆವಾಸದ ಅವಧಿಯಲ್ಲಿ ಅನಂತ-ಅಚ್ಯುತರ ಗೆಳೆತನ ದೃಢವಾಗಿ ಬೆಳೆಯಿತು.

೧೯೭೭ರಲ್ಲಿ ತುರ್ತುಪರಿಸ್ಥಿತಿ ಕೊನೆಗೊಂಡಿತು. ಚುನಾವಣೆಗಳು ನಡೆದವು. ಆ ಸಂದರ್ಭದಲ್ಲೂ ಅಚ್ಯುತ ಲಿಮಯೆ ಅನಂತಕುಮಾರರು ಜೊತೆಗೂಡಿ ಚಟುವಟಿಕೆಗಳಲ್ಲಿ ಭಾಗವಹಿಸಿದ್ದುಂಟು. ಇದಾದಮೇಲೆ ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿ ಪರಿಷತ್ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಹಿರಿಯ ಮುಖಂಡ ಪಿ.ವಿ. ಕೃಷ್ಣಭಟ್ ಆಗಮಿಸಿದರು. ತಾವು ಸೆರೆಮನೆಯಲ್ಲಿ ಇದ್ದಾಗ ತಮ್ಮೊಡನಿದ್ದ ಶ್ರೀಕಾಂತ ದೇಸಾಯಿಯವರು ವಿದ್ಯಾರ್ಥಿ ಪರಿಷತ್ತಿನ ಪ್ರಾಂತ ಕಾರ್ಯದರ್ಶಿಯಾಗಿದ್ದವರು. ಅವರು ತೆಗೆದುಕೊಂಡ ಅಭ್ಯಾಸವರ್ಗವು ಈ ಯುವಕರಿಗೆ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಲ್ಲಿ ಭಾಗವಹಿಸಲು ಈಗಾಗಲೇ ಪ್ರೇರಣೆ ನೀಡಿತ್ತು.




ಕೃಷ್ಣಭಟ್ಟರು ಬೈಠಕ್ ನಡೆಸಿ, ಪರಿಷತ್ತಿನ ಚಟುವಟಿಕೆಗಳನ್ನು ಆರಂಭಿಸುವ ಬಗೆಗೆ, ನಡೆಸಬೇಕಾದ ಕಾರ್ಯದ ಸ್ವರೂಪದ ಬಗೆಗೆ ಬಹುಅಮೂಲ್ಯವಾದ ಮಾರ್ಗದರ್ಶನ ನೀಡಿದರು. ಆ ಹೊತ್ತಿಗೆ ಅಚ್ಯುತ ಲಿಮಯೆ ಧಾರವಾಡದಲ್ಲಿ ಡಿಪ್ಲೊಮಾ ವ್ಯಾಸಂಗಕ್ಕೆ ತೊಡಗಿದ್ದರೆ, ಅನಂತಕುಮಾರ ಪಿಯುಸಿ ಮುಗಿಸಿ ಡಿಗ್ರಿ ಕಾಲೇಜು ಮೆಟ್ಟಿಲೇರುವುದರಲ್ಲಿದ್ದರು. ಗುಡ್ಡು ಇನಾಂದಾರ್ ಮತ್ತು ಅನಿಲ್ ಸಹಸ್ರಬುದ್ಧೆ ಹುಬ್ಬಳ್ಳಿಯಲ್ಲೇ ಇಂಜಿನಿಯರಿಂಗ್ ಓದುತ್ತಿದ್ದರು. ಬಾಗಲಕೋಟೆಯ ಇಂಜಿನಿಯರಿಂಗ್ ಕಾಲೇಜಿನಲ್ಲಿದ್ದ ವಿಷ್ಣುಕಾಂತರಿಗೆ ಕಾಲೇಜು ವರ್ಗಾವಣೆ ಸಿಕ್ಕು ಹುಬ್ಬಳ್ಳಿಗೇ ಬಂದಿದ್ದರು. ಹೀಗಾಗಿ ಇಡಿಯ ಸ್ನೇಹಿತರ ಗುಂಪು ಉತ್ಸಾಹದಿಂದ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮುಂದಾಯಿತು. ನಿಶ್ಚೇತನವಾಗಿದ್ದ ಪರಿಷತ್ತಿಗೆ ಈ ಯುವಕರ ತಂಡ ನವಚೈತನ್ಯವನ್ನು ನೀಡಿತು. ಪ್ರತಿ ಶನಿವಾರ ಶಿವಮೊಗ್ಗದಿಂದ ಹೊರಟು ಸಂಜೆಯ ವೇಳೆಗೆ ಹುಬ್ಬಳ್ಳಿಗೆ ಬರುತ್ತಿದ್ದ ಕೃಷ್ಣಭಟ್ಟರು ಮರುದಿನ ಭಾನುವಾರವಿಡೀ ಈ ತಂಡದೊಂದಿಗೆ ಇದ್ದು ಮಾರ್ಗದರ್ಶನ ನೀಡುತ್ತಿದ್ದರು.

ಈ ಹೊತ್ತಿಗೆ ಅಚ್ಯುತ ಲಿಮಯೆಯನ್ನು ಪ್ರಾಂತ ಕಾರ್ಯಕಾರಣಿಯ ಸದಸ್ಯನನ್ನಾಗಿ ಆರಿಸಲಾಗಿತ್ತು. ಅವರು ಬೆಂಗಳೂರಿಗೂ ಹೋಗಿ ಅಭ್ಯಾಸವರ್ಗದಲ್ಲಿ ಭಾಗವಹಿಸಿ ಬಂದರು. ಕೃಷ್ಣಭಟ್ಟರ ಸೂಚನೆಯ ಮೇರೆಗೆ, ಅಚ್ಯುತ ಲಿಮಯೆ ಸದಸ್ಯರನ್ನು ಸಂಪರ್ಕಿಸಿ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸುವ ಕೆಲಸ ಪ್ರಾರಂಭಿಸಿದರು.

ತನಗೆ ಜವಾಬ್ದಾರಿ ಹುದ್ದೆಯನ್ನು ಕೊಟ್ಟ ಹೊರತು ಪರಿಷತ್ತಿನ ಕೆಲಸಕ್ಕೆ ಬರುವುದಿಲ್ಲವೆಂದು ಗೆಳೆಯನ ಆಹ್ವಾನವನ್ನು ತಿರಸ್ಕರಿಸಿದ್ದ ಅನಂತಕುಮಾರ್ ಜಂಟಿಕಾರ್ಯದರ್ಶಿಯಾಗಿರಲು ಒಪ್ಪಿಕೊಂಡಿದ್ದಕ್ಕೆ ಅಚ್ಯುತ ಲಿಮಯೆ ಮತ್ತವರ ಗುಂಪಿಗೆ ಎಷ್ಟೋ ಸಮಾಧಾನ.

ಪುಟ 4 ರಲ್ಲಿ ಮುಂದುವರಿದಿದೆ

ಪುಟ 1

## ಅನಂತಕುಮಾರ್‌ರ ಸಂಘಟನಾ ಕೌಶಲಗಳು

ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಮತ್ತು ಬಿಜೆಪಿ ಮೈತ್ರಿಕೂಟದೊಳಗೆ ಸಮತೋಲನ ಸಾಧಿಸಿ, ಕಾಂಗ್ರೆಸ್, ಆರ್‌ಜೆಡಿ, ಎಲ್‌ಜೆಪಿ ಮುಂತಾದ ಪ್ರಬಲ ವಿರೋಧ ಪಕ್ಷಗಳ ನಡುವೆ ಹೋರಾಟದ ದಾರಿಯನ್ನು ನಿರ್ಮಿಸಿದರು.

ಅವರು ಕೇವಲ ಸಭೆಗಳನ್ನು ನಡೆಸಲಿಲ್ಲ. ಅವರು ಬಿಹಾರದ ಜನರೊಂದಿಗೆ ನೇರ ಸಂಪರ್ಕ ಬೆಳೆಸಿದರು – ಸ್ಥಳೀಯ ಭಾಷೆಯಲ್ಲಿ ಮಾತನಾಡಿದರು, ಬಿಹಾರದ ಆಹಾರವನ್ನೇ ಸೇವಿಸಿದರು, ಮತ್ತು ಕಾರ್ಯಕರ್ತರ ನಡುವೆ ನಿಂತು ಹೋರಾಟದ ಉತ್ಸಾಹ ತುಂಬಿದರು. ಸುಶೀಲ್ ಮೋದಿ, ನಂದಕಿಶೋರ್ ಯಾದವ್ ಮುಂತಾದ ನಾಯಕರೊಂದಿಗೆ ಕೈಜೋಡಿಸಿ, ಗ್ರಾಮೀಣ ಬಿಹಾರದಲ್ಲಿಯೂ ಪಕ್ಷದ ಚಟುವಟಿಕೆ ಚಿಗುರಲು ಪ್ರೇರಣೆ ನೀಡಿದರು. ಬಿಹಾರದ ರಾಜಕೀಯ ಇತಿಹಾಸದಲ್ಲೇ ಬಿಜೆಪಿ ಅತ್ಯಧಿಕ 91 ಸ್ಥಾನಗಳನ್ನು ಗೆದ್ದು, ಮೈತ್ರಿಕೂಟವು ಐತಿಹಾಸಿಕ ವಿಜಯ ಸಾಧಿಸಿತು. ಇದು ಅನಂತಕುಮಾರ್ ಅವರ ರಾಜಕೀಯ ಕುಶಾಗ್ರ ಬುದ್ಧಿ ಮತ್ತು ಸಂಘಟನಾ ಸಾಮರ್ಥ್ಯದ ಜ್ವಲಂತ ಸಾಕ್ಷಿಯಾಯಿತು.

**ಝಾರ್ಖಂಡ್:** ಬೈಕ್ ಯಾತ್ರೆಯ ಮೂಲಕ ಜನಮನ ಗೆದ್ದವರು ಝಾರ್ಖಂಡ್‌ನಲ್ಲಿ, ಅನಂತಕುಮಾರ್ ಅವರು ರಾಜಕೀಯ ಪ್ರಚಾರದ ಸಾಂಪ್ರದಾಯಿಕ ಮಾದರಿಗಳನ್ನು ಮೀರಿಸಿದರು. ಅದು ಬೈಕ್ ರ್‍ಯಾಲಿ ಮೂಲಕ ರಾಜ್ಯ ಪ್ರವಾಸ! ನಕ್ಸಲ್ ಪೀಡಿತ ಮತ್ತು ದುರ್ಗಮ ಬುಡಕಟ್ಟು ಪ್ರದೇಶಗಳಲ್ಲಿ, ಅವರ 'ಬೈಕ್ ರ್‍ಯಾಲಿ' ಒಂದು ಕ್ರಾಂತಿಕಾರಿ ತಂತ್ರವಾಗಿತ್ತು. ಬೈಕ್‌ನಲ್ಲಿ ಹಳ್ಳಿಹಳ್ಳಿಗೆ ತೆರಳಿ, ಮನೆಮನೆಗೆ ಭೇಟಿ ನೀಡಿದ ಅವರು, ನಾಯಕರಲ್ಲ, ಬದಲಿಗೆ ಒಬ್ಬ ಸಾಮಾನ್ಯ ಕಾರ್ಯಕರ್ತರಂತೆ ಕಾಣಿಸಿಕೊಂಡರು. ಈ ನಡೆ ಕಾರ್ಯಕರ್ತರಲ್ಲಿ ಅಪಾರ ಆತ್ಮವಿಶ್ವಾಸ ತುಂಬಿತು. ಪರಿಣಾಮವಾಗಿ, ಪಕ್ಷವು ಬುಡಕಟ್ಟು ಜನಾಂಗದ ವಿಶ್ವಾಸ ಗಳಿಸಿ ಬಹುಮತದಿಂದ ಅಧಿಕಾರಕ್ಕೆ ಬರಲು ಸಾಧ್ಯವಾಯಿತು.

**ಮಧ್ಯಪ್ರದೇಶ:** ಸಂಘಟನೆ ಮತ್ತು ಆಡಳಿತದ ಸಮ್ಮಿಲನ ಮಧ್ಯಪ್ರದೇಶದಲ್ಲಿ ಅನಂತಕುಮಾರ್ ಅವರು ಸಂಘಟನೆ ಮತ್ತು ಆಡಳಿತದ ನಡುವೆ ಇರಬೇಕಾದ ಪರಿಪೂರ್ಣ ಸಮ್ಮಿಲನವನ್ನು ತೋರಿಸಿದರು. ಶಿವರಾಜ್ ಸಿಂಗ್ ಚೌಹಾಣ್, ನರೇಂದ್ರ ಸಿಂಗ್ ತೋಮರ್ ಮುಂತಾದ ನಾಯಕರೊಂದಿಗೆ ಕೆಲಸ ಮಾಡಿ, ಸಂಘಟನೆಯ ದೃಢತೆ ಹೇಗೆ ಪರಿಣಾಮಕಾರಿ ಆಡಳಿತವನ್ನು ಬಲಪಡಿಸುತ್ತದೆ ಎಂಬುದನ್ನು ಸಾಬೀತುಪಡಿಸಿದರು. ಮಧ್ಯಪ್ರದೇಶದ "ಸಂಘಟನಾ ಮಾದರಿ" ಇಂದು ದೇಶದಾದ್ಯಂತ ರಾಜಕೀಯ ಅಧ್ಯಯನಕ್ಕೆ ಒಂದು ವಿಷಯವಾಗಿದೆ.




**ಅನಂತಕುಮಾರ್‌ರ ಯಶಸ್ಸಿನ ರಹಸ್ಯ**

ಇಂದಿನ ಡೇಟಾ, ಸೋಶಿಯಲ್ ಮೀಡಿಯಾ ಕ್ಯಾಂಪೇನ್‌ಗಳು ಮತ್ತು ತಂತ್ರಜ್ಞಾನ-ಕೇಂದ್ರಿತ ಚುನಾವಣಾ ತಂತ್ರಗಳ ಈ ಯುಗದಲ್ಲಿ, ಅನಂತಕುಮಾರ್ ಅವರ ರಾಜಕೀಯ ಮತ್ತು ಸಂಘಟನಾ ಪಾಠಗಳು ಅತ್ಯಂತ ಪ್ರಸ್ತುತವಾಗಿವೆ. ತಂತ್ರಜ್ಞಾನವು ವಿಸ್ತರಣೆಗೆ ಅತ್ಯಗತ್ಯ ಸಾಧನವಾದರೂ, ಅದು ಎಂದಿಗೂ ಮಾನವ ಸ್ಪರ್ಶದ ಅವಶ್ಯಕತೆಯನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬುದು ಅವರ ಬದುಕಿನ ಪ್ರಮುಖ ಪಾಠವಾಗಿದೆ. ಕಾರ್ಯಕರ್ತರು ಮತ್ತು ಮತದಾರರೊಂದಿಗೆ ನೇರ, ವೈಯಕ್ತಿಕ ಸಂಬಂಧವನ್ನು ಉಳಿಸಿಕೊಂಡು, ಬೈಕ್ ಯಾತ್ರೆಯಂತಹ ವಿಧಾನಗಳ ಮೂಲಕ ಅವರು ಜನರ ಬಳಿಗೆ ತಲುಪಿದ್ದು ಇದಕ್ಕೆ ಸಾಕ್ಷಿ. ರಾಜ್ಯಕ್ಕೆ ಬಂದಾಗ ಅಲ್ಲಿನ ಸಾಂಸ್ಕೃತಿಕ ಸಂವೇದನಶೀಲತೆಯನ್ನು ಗೌರವಿಸುವುದು ಮತ್ತು ಅಳವಡಿಸಿಕೊಳ್ಳುವುದು ವಿಶ್ವಾಸದ ಸೇತುವೆಯನ್ನು ನಿರ್ಮಿಸುತ್ತದೆ ಎಂಬುದನ್ನು ಅವರು ಮನಗಂಡಿದ್ದರು.

ಅಷ್ಟೇ ಅಲ್ಲದೆ, ಅವರ ನೇತೃತ್ವವು ಕಾರ್ಯಕರ್ತ-ಕೇಂದ್ರಿತವಾಗಿತ್ತು; ಅವರು ಕೇವಲ ಅಧಿಕಾರಿಗಳೊಂದಿಗೆ ಮಾತ್ರವಲ್ಲದೆ, ರಾತ್ರಿಯ ವೇಳೆ ಕಾರ್ಯಕರ್ತರೊಂದಿಗೆ ಊಟ ಮಾಡಿ, ಅವರ ಸಮಸ್ಯೆಗಳನ್ನು ಆಲಿಸುತ್ತಾ ಅವರ ಹೃದಯವನ್ನು ಗೆಲ್ಲುತ್ತಿದ್ದರು. ಅವರ ರಾಜಕೀಯದ ಮುಖ್ಯ ಧ್ಯೇಯ ಕೇವಲ ತಾತ್ಕಾಲಿಕ ಚುನಾವಣಾ ಯಶಸ್ಸು ಆಗಿರದೆ, ದೀರ್ಘಕಾಲೀನ ದೃಷ್ಟಿಯೊಂದಿಗೆ ಶಾಶ್ವತ ಸಂಘಟನಾ ರಚನೆಯನ್ನು ನಿರ್ಮಿಸುವುದಾಗಿತ್ತು. ಭಾಷೆ ಗೊತ್ತಿಲ್ಲದ ರಾಜ್ಯಗಳಲ್ಲಿ, ಸೌಕರ್ಯವಿಲ್ಲದ ಪ್ರದೇಶಗಳಲ್ಲಿ, ಕೇವಲ ಸಂಘಟನೆಯ ಶಕ್ತಿ ಮತ್ತು ನಂಬಿಕೆಯ ಆಧಾರದಲ್ಲಿ ವಿಜಯ ಗಳಿಸಿದ ಅವರ ಕಥೆ – ಸೇವಾ ರಾಜಕಾರಣಕ್ಕೆ ಒಂದು ಮಾರ್ಗದರ್ಶಿ. ಇಂದು ಬಿಹಾರದ ಚುನಾವಣೆಯ ಸಂದರ್ಭದಲ್ಲಿ ಅವರ ತತ್ವಗಳು ಮತ್ತೊಮ್ಮೆ ನೆನಪಾಗುತ್ತಿವೆ: "ದೇಶದ ನಿಜವಾದ ಬಲ ಜನರ ವಿಶ್ವಾಸದಲ್ಲಿದೆ. ಆ ವಿಶ್ವಾಸ ಗೆಲ್ಲುವ ನಾಯಕರೇ ದೇಶದ ನಿಜವಾದ ಶಕ್ತಿ." ಅವರ ಶ್ರಮದ ಬೀಜಗಳು ಇಂದಿಗೂ ಬಿಹಾರ, ಝಾರ್ಖಂಡ್ ಮತ್ತು ಮಧ್ಯಪ್ರದೇಶದ ರಾಜಕೀಯದಲ್ಲಿ ಹಸಿರಾಗಿವೆ. ಅವರ ಚುನಾವಣಾ ತಂತ್ರಗಳು ಮತ್ತು ಸಂಘಟನಾ ಶೈಲಿಯು ಇಂದಿನ ಯುವ ರಾಜಕಾರಣಿಗಳಿಗೆ ಒಂದು ಪ್ರೇರಣಾ ಮೂಲವಾಗಲಿ.

ಪುಟ 3 ರಿಂದ

## ಗೆಳೆಯನಿಂದ ಪೋಸ್ಟ್ ಪಡೆದುಕೊಂಡ ಎಳೆಯ

ಈ ಗುಂಪಿನಲ್ಲಿ ಅನಂತಕುಮಾರನೇ ಕಿರಿಯ. ಆದರೆ, ಅಷ್ಟುಹೊತ್ತಿಗಾಗಲೇ ಅನಂತಕುಮಾರರ ಸಂಘಟನಾಕೌಶಲ, ವಾಕ್ಚಾತುರ್ಯ, ನಾಯಕತ್ವದ ಗುಣಲಕ್ಷಣಗಳು ಎಲ್ಲ ಗೆಳೆಯರ ಮನಸೆಳೆದಿದ್ದವು. ಹಾಗಾಗಿ ತಮ್ಮ ಗುಂಪಿನಿಂದಾಗಲಿ, ಪರಿಷತ್ತಿನಿಂದಾಗಲಿ ಅನಂತಕುಮಾರನನ್ನು ಕಳೆದುಕೊಳ್ಳಲು ಯಾರಿಗೂ ಇಷ್ಟವಿರಲಿಲ್ಲ.

ಮುಂದೆ, ತನಗೆ ಪೋಸ್ಟ್ ಬೇಕು ಎಂದು ಹಟ ಮಾಡಿ ಪಡೆದ ಅನಂತಕುಮಾರ ಸಂಘದ ಮತ್ತು ವಿದ್ಯಾರ್ಥಿ ಪರಿಷದ್ ನ ಹಿರಿಯರ ಮಾರ್ಗದರ್ಶನದಲ್ಲಿ ಬೆಳೆದು ಎಬಿವಿಪಿ ಯನ್ನು ರಾಜ್ಯಾಂದ್ಯಂತ ಎಲ್ಲರೂ ಗುರುತಿಸುವ ಸಂಘಟನೆ ಯಾಗಿ ಬೆಳೆಸಿದ್ದಷ್ಟೇ ಅಲ್ಲದೇ ತಾನೂ ವೈಯಕ್ತಿಕವಾಗಿ ಪ್ರಬುದ್ಧವಾಗಿ ಬೆಳೆಯುತ್ತಾ ಸಾವಿರಾರು ಯುವಕರನ್ನು ರಾಷ್ಟ್ರಸೇವೆಗೆ ಜೋಡಿಸಿದ್ದು ನಂತರ BJP ಯ ಬಲವರ್ಧನೆಗೆ ತನಗಿಂತ ಹಿರಿಯ ವಯಸ್ಸಿನ ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುತ್ತಾ ರಾಷ್ಟ್ರ ಪ್ರಥಮ ಎಂಬ ನುಡಿಮುತ್ತನ್ನು ಅಕ್ಷರಶಃ ಪಾಲಿಸಿ, ನಾಡಿನ ಶ್ರೇಷ್ಠ ನಾಯಕನಾಗಿ ಬೆಳೆದ ಪರಿ ಅಪ್ರತಿಮ.

**ಅದಮ್ಯ ಚೇತನದಿಂದ ವಿವಿಧೆಡೆ ನಿರಂತರವಾಗಿ ನಡೆಯುತ್ತಿರುವ ಅನ್ನದಾನ ಚಿತ್ರಗಳು**









ನಾನು ಕಂಡಂತೆ



ಅನಂತಕುಮಾರ್

# ಅನಂತಕುಮಾರ್ — ರಾಜ್ಯದ ಪ್ರಗತಿಗೆ ಸಮರ್ಪಿತ ರಾಯಭಾರಿ

ರಾಜಕಾರಣದ ಗದ್ದಲದ ಮಧ್ಯೆಯೂ ಹೃದಯದಲ್ಲಿ ಸಮಾಜದ ಶ್ರೇಯಸ್ಸಿನ ನಿತ್ಯ ನಾದವನ್ನು ಇಟ್ಟುಕೊಂಡವರು ಶ್ರೀ ಅನಂತಕುಮಾರ್. ಅವರು ಸಚಿವರಾಗಿ ಕೇಂದ್ರದಲ್ಲಿ ಯಾವುದೇ ಹುದ್ದೆಯಲ್ಲಿದ್ದರೂ ಅದು ನಗರಾಭಿವೃದ್ಧಿ ಆಗಲಿ, ರಾಸಾಯನಿಕ ಮತ್ತು ರಸಗೊಬ್ಬರ ಇಲಾಖೆ ಆಗಲಿ ರಾಷ್ಟ್ರದ ಹಿತಾಸಕ್ತಿಯೇ ಅವರ ರಾಜಕೀಯ ಧ್ಯೇಯವಾಗಿತ್ತು.



ಮೆಟ್ರೋ ರೈಲು ಯೋಜನೆಯ ವೇಗ, ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ನಿರ್ಮಾಣ ಎಲ್ಲದರಲ್ಲಿಯೂ ಅವರ ದೃಢನಿಶ್ಚಯ ಸ್ಪಷ್ಟವಾಗಿತ್ತು. ಅವರು ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಉಪಪ್ರಧಾನಿ ಎಲ್.ಕೆ. ಅಡ್ವಾಣಿಯವರ ನಿಕಟ ಸಹಚರರಾಗಿದ್ದರೂ, ಆ ಸಂಬಂಧವನ್ನು ವೈಯಕ್ತಿಕ ಲಾಭಕ್ಕಾಗಿ ಎಂದೂ ಬಳಸಲಿಲ್ಲ. ರಾಜ್ಯದ ಅಭಿವೃದ್ಧಿ, ರಾಷ್ಟ್ರದ ಪ್ರಗತಿ ಇವೇ ಅವರ ಮನದ ಕೇಂದ್ರ ಬಿಂದುಗಳಾಗಿದ್ದವು. ಅವರ ಜೊತೆ ಕೇವಲ ಹತ್ತು ನಿಮಿಷ ಮಾತಾಡಿದರೂ ಹೊಸ ಆಲೋಚನೆ, ಹೊಸ ಯೋಜನೆ ಕುರಿತ ಪ್ರೇರಣೆ ದೊರಕುತ್ತಿತ್ತು.

**ಮಾನವೀಯ ನಿರ್ಧಾರಗಳು - ಆರೋಗ್ಯ ಕ್ಷೇತ್ರಕ್ಕೆ ಹೊಸ ದಿಕ್ಕು**

ಅನಂತಕುಮಾರ್ ಅವರು ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರಾಗಿದ್ದ ಸಮಯದಲ್ಲಿ ಕೈಗೊಂಡ ಒಂದು ಮಹತ್ತರ ಮಾನವೀಯ ನಿರ್ಧಾರವೆಂದರೆ ಹೃದಯ ರೋಗಿಗಳಿಗೆ ಬಳಸುವ ಸ್ಟೆಂಟ್‌ಗಳ ಬೆಲೆ ಇಳಿಕೆ. ಮೊದಲು ₹70,000 ರಿಂದ ₹1 ಲಕ್ಷದೊಳಗಿದ್ದ ಸ್ಟೆಂಟ್ ಬೆಲೆಯನ್ನು ₹25,000ಕ್ಕೆ ಇಳಿಸಿದ ಕ್ರಮದಿಂದ ಕೋಟ್ಯಾಂತರ ಮಧ್ಯಮ ಹಾಗೂ ಬಡ ವರ್ಗದ ರೋಗಿಗಳಿಗೆ ಹೊಸ ಜೀವದೀಪ ಬೆಳಗಿತು. ಇದು ಆರೋಗ್ಯ ಕ್ಷೇತ್ರದ ಕ್ರಾಂತಿಕಾರಿ ಹೆಜ್ಜೆ ಎಂಬ ಖ್ಯಾತಿ ಪಡೆಯಿತು. ಅದೇ ಸಮಯದಲ್ಲಿ ರೈತರ ಹಿತಾಸಕ್ತಿಗಾಗಿ ರಸಗೊಬ್ಬರದ ಮೇಲಿನ ರಿಯಾಯಿತಿ ನೀಡುವ ಮೂಲಕ ಕೃಷಿ ಕ್ಷೇತ್ರಕ್ಕೂ ಪ್ರೋತ್ಸಾಹ ನೀಡಿದರು. ಸಾರ್ವಜನಿಕ ಆರೋಗ್ಯ ಸೇವೆಯಲ್ಲಿನ ಸುಧಾರಣೆಗಾಗಿ, ಅವರು ತಮ್ಮ ಎಂಪಿ ಲ್ಯಾಡ್ ನಿಧಿಯಿಂದ ಜಯದೇವ ಹೃದ್ರೋಗ ಸಂಸ್ಥೆಗೆ ಎಕೋ ಮಿಷನ್ ಯಂತ್ರಗಳನ್ನು ನೀಡಿದರು.

ಅನಂತಕುಮಾರ್ ಅವರ ಆದರ್ಶ ಮತ್ತು ನಿಸ್ವಾರ್ಥ ಸೇವಾ ಮನೋಭಾವವನ್ನು ಮುಂದುವರಿಸುತ್ತಿರುವವರು ಶ್ರೀಮತಿ ತೇಜಸ್ವಿನಿ ಅನಂತಕುಮಾರ್. ಅವರು ಅದಮ್ಯ ಚೇತನದ ಮುಖಾಂತರ ಸಮಾಜಮುಖಿ ಕಾರ್ಯಗಳಿಗೆ ಹೊಸ ಆಯಾಮ ನೀಡುತ್ತಿದ್ದಾರೆ. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಮಧ್ಯಾಹ್ನ ಬಿಸಿಯೂಟ ಯೋಜನೆ, ಸ್ವಚ್ಛ ಹಸಿರು ಪರಿಸರ ನಿರ್ಮಾಣ, ಮತ್ತು ಪ್ಲೇಟ್ ಬ್ಯಾಂಕ್ ಯೋಜನೆಗಳಂತಹ ಉಪಕ್ರಮಗಳು ಅವರ ಚಿಂತನೆಯ ಸಾಮಾಜಿಕ ತಳಹದಿಯನ್ನು ಪ್ರತಿಬಿಂಬಿಸುತ್ತವೆ. ಎಲ್ಲಾ ದಾನಗಳಲ್ಲಿ ಅತಿ ದೊಡ್ಡ ದಾನ ಅನ್ನದಾನ" ಎಂಬ ಮಾತನ್ನು ನಿಜಾರ್ಥದಲ್ಲಿ ಅರ್ಥೈಸಿದವರು ತೇಜಸ್ವಿನಿ ಅನಂತಕುಮಾರ್ ಅವರು ಪ್ಲೇಟ್ ಬ್ಯಾಂಕ್ ಯೋಜನೆ ಮೂಲಕ ಮದುವೆ, ಸಮಾರಂಭಗಳಲ್ಲಿ ಉಚಿತವಾಗಿ ಸ್ಟೀಲ್ ತಟ್ಟೆಗಳನ್ನು ನೀಡುವ ಕಾರ್ಯ ನಡೆಯುತ್ತಿದೆ. ಈ ಯೋಜನೆ ಕಸದ ಪ್ರಮಾಣವನ್ನು ಕಡಿಮೆ ಮಾಡಿ, ಸ್ವಚ್ಛತೆಯನ್ನು ಉತ್ತೇಜಿಸುತ್ತಿದೆ ಹಾಗೂ ಪರಿಸರ ಪ್ರಜ್ಞೆಯನ್ನು ಜನಮನದಲ್ಲಿ ಬಿತ್ತುತ್ತಿದೆ.

ಸ್ವಚ್ಛತೆ ಮತ್ತು ಆರೋಗ್ಯವು ಪರಸ್ಪರ ಅವಿಭಾಜ್ಯ. ಪ್ಲಾಸ್ಟಿಕ್ ಅಥವಾ ಬಾಳೆ ಎಲೆಗಳ ತ್ಯಾಜ್ಯವು ಪರಿಸರಕ್ಕೆ ಹಾನಿ ಉಂಟುಮಾಡುತ್ತದೆ ಎಂಬ ಅರಿವು ಜನರಲ್ಲೆಬ್ಬಿಸಲು ಪ್ಲೇಟ್ ಬ್ಯಾಂಕ್ ಯೋಜನೆ ನಿಜವಾದ ಸಾಮಾಜಿಕ ಪ್ರಯೋಗವಾಗಿದೆ. ತೇಜಸ್ವಿನಿಯವರ ಮನೆ ಮೇಲ್ಮಹಡಿಯಲ್ಲಿ ಬೆಳೆದ ಹಸಿರು ತೋಟವೂ ಪರಿಸರ ಸಂರಕ್ಷಣೆಯತ್ತ ಅವರ ಕಾಳಜಿಯ ನಿಜವಾದ ಸಾಕ್ಷ್ಯವಾಗಿದೆ.

ಅನಂತಕುಮಾರ್ ಮತ್ತು ತೇಜಸ್ವಿನಿ ದಂಪತಿಯ ರಾಷ್ಟ್ರಪ್ರೇಮ, ನಿಸ್ವಾರ್ಥ ಸೇವೆ ಮತ್ತು ಸಮಾಜಮುಖಿ ಚಿಂತನೆಗಳ ಜೀವಂತ ಉದಾಹರಣೆ. ಇವರ ಜೀವನದ ಬೆಳಕು ಇಂದಿನ ಯುವಜನತೆಗೆ ಪ್ರೇರಣೆ.

**-ಡಾ ಮಂಜುನಾಥ್ ಸಂಸದರು,**
**ಬೆಂಗಳೂರು ಗ್ರಾಮಾಂತರ**

# ದೂರದೃಷ್ಟಿಯ ನಾಯಕ — ಅನಂತಕುಮಾರ್



**ಪ್ರಕಾಶ್ ಶೇಷರಾಘವಾಚಾರ್**

ಶ್ರೀ ಅನಂತಕುಮಾರ್ ಅವರು ಸಂಸದೀಯ ಸಚಿವರಾಗಿದ್ದ ಕಾಲದಲ್ಲಿ, ರಾಷ್ಟ್ರದ ಆರ್ಥಿಕ ಇತಿಹಾಸದಲ್ಲಿ ಒಂದು ಮಹತ್ವದ ಪುಟವನ್ನು ಬರೆಯಲಾಯಿತು. ಅವರ ಸತತ ಪ್ರಯತ್ನ ಮತ್ತು ಕಾರ್ಯಪಟುತೆಯಿಂದಾಗಿಯೇ ಜಿ.ಎಸ್.ಟಿ. ಮಸೂದೆ ಸಂಸತ್ತಿನಲ್ಲಿ (ಪಾರ್ಲಿಮೆಂಟ್‌ನಲ್ಲಿ) ಅಂಗೀಕೃತವಾಗಿ, ಒಂದು ಐತಿಹಾಸಿಕ ಕಾನೂನಾಗಿ ರೂಪುಗೊಂಡಿತು. ಕಾಕತಾಳೀಯವೆಂದರೆ, ಅವರ ಜನ್ಮದಿನದಂದೇ ಜಿ.ಎಸ್.ಟಿ. 2.0 ಜಾರಿಗೆ ಬಂದಿರುವುದು ಒಂದು ವಿಶೇಷ. ಅವರು ನೆಟ್ಟಿದ್ದ ಆ ಸುಧಾರಣೆಯ ಗಿಡ ಇಂದು ಒಂದು ದೊಡ್ಡ ಆಲದ ಮರವಾಗಿ ಬೆಳೆದಿರುವುದು ಅವರ ದೂರದೃಷ್ಟಿಗೆ ಸಾಕ್ಷಿಯಾಗಿದೆ.

ಅನಂತಕುಮಾರ್ ಅವರ ಕೊಡುಗೆಗಳನ್ನು ವಿವರಿಸಲು ಶಬ್ದಗಳೇ ಸಾಲದು. ಬೆಂಗಳೂರಿನ ಯಾವ ಮೂಲೆಯನ್ನು ನೋಡಿದರೂ, ಅದರ ಅಭಿವೃದ್ಧಿಯ ಹಿಂದೆ ಅವರ ದೃಢಸಂಕಲ್ಪ ಮತ್ತು ಪರಿಶ್ರಮ ಅಡಗಿದೆ. ಇತ್ತೀಚೆಗೆ ನಾನು ಮೈಸೂರು ಸಂಸದರಾದ ಪ್ರತಾಪ್ ಸಿಂಹರೊಂದಿಗೆ ಮಾತನಾಡುತ್ತಿದ್ದಾಗ ಅವರು ಸ್ಪಷ್ಟವಾಗಿ ಹೇಳಿದರು "ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಸಾಧ್ಯವಾಗಿದ್ದು ಅನಂತಕುಮಾರ್ ಅವರ ದೃಷ್ಟಿ ಮತ್ತು ಸಹಕಾರದಿಂದಲೇ" ಎಂದು ಹೇಳಿದರು. ಇದು ಅವರ ಕಾರ್ಯದ ವ್ಯಾಪ್ತಿ ಎಷ್ಟು ದೂರವಿತ್ತು ಎಂಬುದನ್ನು ತೋರಿಸುತ್ತದೆ.

ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್. ಎಮ್. ಕೃಷ್ಣ ಅವರು, ಅನಂತಕುಮಾರ್ ವಿರೋಧ ಪಕ್ಷದಲ್ಲಿದ್ದರು ಪಕ್ಷಾತೀತವಾಗಿ ಅವರನ್ನು ಕರ್ನಾಟಕದ "ಆಪದ್ಬಾಂಧವ" ಎಂದು ಕರೆದಿದ್ದರು. ಕಾವೇರಿ ನೀರಿನ ವಿವಾದವನ್ನು ಬಗೆಹರಿಸಲು, ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಸಹಕಾರದೊಂದಿಗೆ ಅನಂತಕುಮಾರ್ ವಹಿಸಿದ ಪಾತ್ರವು, ರಾಜ್ಯದ ಹಿತಾಸಕ್ತಿಯನ್ನು ಕಾಪಾಡಿದ ಒಂದು ಅದ್ಭುತ ಉದಾಹರಣೆಯಾಗಿದೆ.

ಬೆಂಗಳೂರು ಮೆಟ್ರೋ ಯೋಜನೆಯಿಂದ ಹಿಡಿದು, ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಯ ತನಕ ಎಲ್ಲೆಡೆ ಅವರ ಹಾದಿಯ ಗುರುತುಗಳು ಕಾಣಿಸುತ್ತವೆ. ಜನಸೇವೆಗೆ ತಮ್ಮ ಜೀವನವನ್ನೇ ಅರ್ಪಿಸಿದ ಈ ಮಹಾನ್ ನಾಯಕನ ದೃಷ್ಟಿ, ನಿಷ್ಠೆ ಮತ್ತು ಅಚಲವಾದ ಕಾರ್ಯಪಟುತೆಯು ಇಂದಿಗೂ ಎಲ್ಲರಿಗೂ ಮಾರ್ಗದರ್ಶಕವಾಗಿವೆ.

# ಚಿಣ್ಣರ ಚೇತನ

ಮಕ್ಕಳಿಗಾಗಿ ರೂಪಿತವಾದ ವಿಶೇಷ ಪುಟಗಳು

ಪ್ರಕಾಶಕರು:
ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ


## ಉಕ್ಕಿನ ಮನುಷ್ಯನ ಕಂಚಿನ ಪ್ರತಿಮೆ



150 ವರ್ಷಗಳ ಹಿಂದೆ 1875ರ ಅಕ್ಟೊಬರ್ 31 ರಂದು ಸರ್ದಾರ್ ವಲ್ಲಭಭಾಯ್ ಪಟೇಲರು ಜನಿಸಿದರು. ಗುಜರಾತಿನ ಸರ್ದಾರ್ ಸರೋವರ ಜಲಾಶಯದ ಬಳಿ 182 ಮೀಟರ್ ಎತ್ತರದ ಅವರ ಪ್ರತಿಮೆಯನ್ನು ನಿಲ್ಲಿಸಲಾಗಿದೆ. ಅಂದರೆ ಎಷ್ಟೆತ್ತರ ಗೊತ್ತೆ? ನಮ್ಮ ಬಾಹುಬಲಿಯಂಥ ಹತ್ತು ಪ್ರತಿಮೆಗಳನ್ನು ಒಂದರ ಮೇಲೆ ಒಂದರಂತೆ ನಿಲ್ಲಿಸಿದರೆ ಸರ್ದಾರ್ ಪ್ರತಿಮೆಯ ಭುಜದವರೆಗೆ ಬರುತ್ತದೆ! ಇದು ಜಗತ್ತಿನ ಅತಿ ಎತ್ತರದ ಪ್ರತಿಮೆ. ಇದರ ನಿರ್ಮಾಣಕ್ಕೆ ಕಾರಣರಾದ ಪ್ರಧಾನಿ ಮೋದಿಯವರ ಆಶಯದಂತೆ ಪಟೇಲರ ಜನ್ಮದಿನವನ್ನು 'ಏಕತಾ ದಿನ' ಎಂದು ನಾವು ಆಚರಿಸುತ್ತೇವೆ. ಅದಕ್ಕೆ ಮುಖ್ಯ ಕಾರಣ ಏನೆಂದರೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಹೊಸದರಲ್ಲಿ ಭಾರತ ಎಂದರೆ ಸುಮಾರು 565 ಬಿಡಿ ಬಿಡಿ ರಾಜರುಗಳ, ಸಂಸ್ಥಾನಗಳ ನೆಲೆಯಾಗಿತ್ತು. ಕೇಂದ್ರ ಗೃಹ ಸಚಿವರಾಗಿದ್ದ ಪಟೇಲರು ಅವರನ್ನೆಲ್ಲ ಒಡಂಬಡಿಸಿ, ಒಗ್ಗೂಡಿಸಿ, ಕೆಲವೊಮ್ಮೆ ಉಕ್ಕಿನಷ್ಟು ಗಟ್ಟಿಪಟ್ಟು ಹಿಡಿದು ಬೆದರಿಸಿ ಒಪ್ಪಿಸಿ ಇದನ್ನು ಒಂದು "ರಾಷ್ಟ್ರ"ವಾಗಿ ರೂಪಿಸಿದರು. 'ಏಕತೆ' ಎಂದರೆ ಹೀಗೆ ನಾವು ನಮ್ಮನಮ್ಮ ಭೇದಭಾವವನ್ನು ಮರೆತು ಒಗ್ಗಟ್ಟಾಗಿ ಪ್ರಬಲ ರಾಷ್ಟ್ರವನ್ನು ರೂಪಿಸುವ ದಿನ.

## ಮೇಲೆದ್ದು ಬಂದ ಮಲೆನಾಡಿನ ಗಿಡ್ಡ



ರಾಜ್ಯೋತ್ಸವದ ಈ ಸಂದರ್ಭದಲ್ಲಿ ನಮ್ಮ ನಾಡಿನ ಮಹತ್ವದ ಗೋವುಗಳ ತಳಿಗಳ ಹೆಸರುಗಳನ್ನು ನೆನಪಿಸಿಕೊಳ್ಳೋಣವೆ? ಹಳ್ಳೀಕಾರ್, ಅಮೃತ ಮಹಲ್, ಖಿಲ್ಲಾರಿ, ದೇವಣಿ... ಇವೆಲ್ಲವೂ ತಮ್ಮ ವಿಶಿಷ್ಟ ಮೈಕಟ್ಟು, ದೇಹದಾರ್ಢ್ಯ, ಹಾಲಿನ ಇಳುವರಿ ಇತ್ಯಾದಿಗಳಿಗೆ ಪ್ರಸಿದ್ಧವಾಗಿವೆ. ಆದರೆ ಈ ಮೂರೂ ಗುಣವಿಶೇಷ ಇಲ್ಲದ, ಕೇವಲ ನಾಲ್ಕಡಿ ಎತ್ತರದ 'ಮಲೆನಾಡ ಗಿಡ್ಡ' ತಳಿಯ ಗೋವುಗಳ ಬಗ್ಗೆ ಈಗ ವಿಜ್ಞಾನಿಗಳು ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಇವು ಗುಡ್ಡ ಏರುತ್ತ, ಕಂದರಗಳಲ್ಲಿ ಜಿಗಿಯುತ್ತ, ದಟ್ಟ ಕಾನನದ ನಡುವೆ ನುಸುಳಿ ನಾನಾ ವಿಧದ ಸಸ್ಯಸಂಪದವನ್ನು ಮೇಯುತ್ತ ಮಲೆನಾಡಿನ ದುರ್ಗಮ ನಿಸರ್ಗದಲ್ಲಿ ಬದುಕುಳಿಯುವ ಸಾಮರ್ಥ್ಯ ಪಡೆದು ಭಾರೀ ಗಟ್ಟಿ ತಳಿಯೆಂದು ಖ್ಯಾತಿ ಪಡೆದಿವೆ. ಇಪ್ಪತ್ತು ಕರುಗಳನ್ನು ಈಯುವ 'ಗಿಡ್ಡ'ಗಳೂ ಇವೆ. ರೋಗರುಜಿನ ಬರುವುದು ತೀರ ಅಪರೂಪ. ಅಲ್ಲಿನ ಚಿಕ್ಕಪುಟ್ಟ ಗದ್ದೆಗಳ ಉಳುಮೆಗೆ ಈ ಗಿಡ್ಡ ಹೋರಿಗಳು ಸಲೀಸಾಗಿ ಹೆಗಲು ಕೊಡುತ್ತವೆ. ಹಸುಗಳು ಕೇವಲ ಒಂದೆರಡೇ ಲೀಟರ್ ಹಾಲು ಕೊಡುತ್ತವಾದರೂ ವೈವಿಧ್ಯಮಯ ಸಸ್ಯಗಳನ್ನು ಮೇದು ಬರುವುದರಿಂದ ಆ ಹಾಲಿನಲ್ಲಿ ಸಮೃದ್ಧ, ಸಮತೋಲದ ಪೋಷಕಾಂಶ ಇರುತ್ತದೆ. ಔಷಧೀಯ ಗುಣಗಳೂ ಇವೆಯೆಂದು ಹೇಳಲಾಗುತ್ತದೆ.

ನವೆಂಬರ್ 26ನ್ನು ನಾವು 'ರಾಷ್ಟ್ರೀಯ ಹೈನು ದಿನ' ಎಂದು ಆಚರಿಸುತ್ತೇವೆ. ಅದು ಹೈನು ಪಿತಾಮಹ ಡಾ. ವರ್ಗೀಸ್ ಕುರಿಯನ್ ಅವರ ಜನ್ಮದಿನವೂ ಹೌದು. ಐವತ್ತು ವರ್ಷಗಳ ಹಿಂದೆ ಭಾರತದಲ್ಲಿ ಹಾಲಿನ ಅಭಾವ ಇತ್ತು. ಇವರು ಗುಜರಾತಿನಲ್ಲಿ ಅಮುಲ್ ಹಾಲಿನ ಡೈರಿ ಸ್ಥಾಪಿಸಿ, ನಮ್ಮ ದೇಶದ ಹಳ್ಳಿಹಳ್ಳಿಯಲ್ಲಿ ಶ್ವೇತಕ್ರಾಂತಿ ಆಗಲು ಪ್ರೇರಣೆ ಕೊಟ್ಟವರು. ಈಗೇನು, ಹಳ್ಳಿಯಿಂದ ನಗರಕ್ಕೆ ದಿನವೂ ಹಾಲಿನ ಧಾರೆಯೇ ಹರಿದು ಬರುತ್ತಿದೆ. ಆದರೆ ಜಾಸ್ತಿ ಮೇವು ತಿಂದು, ಜಾಸ್ತಿ ಹಾಲು ಕೊಡುವ ಜೆರ್ಸಿ, ಎಚ್ಚೆಫ್ ಮುಂತಾದ ವಿದೇಶೀ ತಳಿಗಳಿಗೇ ಹೈನು ಉದ್ಯಮದಲ್ಲಿ ಆದ್ಯತೆ ಇರುವುದರಿಂದ ಸ್ಥಳೀಯ ತಳಿಯ ರಾಸುಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಅವು ಪೂರ್ತಿ ಕಣ್ಮರೆ ಆಗದ ಹಾಗೆ ರಕ್ಷಿಸಬೇಕು. ಮಲೆನಾಡಿನ ಈ ಗಿಡ್ಡ ತಳಿಯ ಮಹತ್ವವನ್ನು ಜನರಿಗೆ ತಿಳಿಸಲು ಈಗ ವಿಶೇಷ ಪ್ರಯತ್ನಗಳು ನಡೆಯುತ್ತಿವೆ.

## ಲಂಡನ್ನಿನಲ್ಲಿ ಬೇರೆ ಬಗೆಯ ನರಕಾಸುರ ವಧೆ



ನಮ್ಮಲ್ಲೇನೋ ನವರಾತ್ರಿಯ ರಾವಣ ಸಂಹಾರ, ದೀಪಾವಳಿಯ ನರಕಾಸುರ ವಧೆ, ಪಟಾಕಿ ಸಂಭ್ರಮ ಎಲ್ಲ ಮುಗಿಯಿತು. ಅತ್ತ ಬ್ರಿಟನ್ನಿನಲ್ಲಿ ಪ್ರತಿವರ್ಷ ನವಂಬರ್ 5ರಂದು ಒಂದು ವಿಧದ 'ರಾಕ್ಷಸ ದಹನ' ಮತ್ತು ಪಟಾಕಿ ಸಂಭ್ರಮ ನಡೆಯುತ್ತದೆ. ಅದಕ್ಕೆ 'ಗೈ ಫಾಕಿಸ್ ನೈಟ್' (Guy Fawkes Night) ಎನ್ನುತ್ತಾರೆ. ನಮ್ಮಲ್ಲಿ ಹೇಗೆ 2001ರಲ್ಲಿ ಪಾರ್ಲಿಯಮೆಂಟ್ ಭವನದ ಮೇಲೆ ದಾಳಿಯ ಯತ್ನ ನಡೆದಿತ್ತೊ ಅದೇ ರೀತಿ 1605ರ ನವಂಬರ್ 5ರಂದು ಬ್ರಿಟಿಷ್ ಸಂಸತ್ ಭವನವನ್ನು ಸ್ಫೋಟಿಸಿ ಅಂದಿನ ಜಾರ್ಜ್ ದೊರೆಯನ್ನು ಕೊಲ್ಲುವ ಸಂಚು ನಡೆದಿತ್ತು. ಅದು ಯಶಸ್ವಿಯಾಗಲಿಲ್ಲ. ಆದರೆ ಸಂಸತ್ ಭವನದ ನೆಲ ಮಾಳಿಗೆಯಲ್ಲಿ ಬಂದೂಕು ಮದ್ದಿನ 36 ಮೂಟೆಗಳೊಂದಿಗೆ ಗೈ ಫಾಕಿಸ್ ಎಂಬಾತ ಸಿಕ್ಕಿ ಬಿದ್ದ. ಸಹಚರರ ಸಮೇತ ಆತನನ್ನು ಬಂಧಿಸಿ ಗಲ್ಲಿಗೆ ಹಾಕಲಾಯಿತು. ಇಂದಿಗೂ ಆ ಘಟನೆಯ ಕಹಿ ನೆನಪಿಗಾಗಿ ಅವನ ಪ್ರತಿಕೃತಿಯ ದಹನ ಮಾಡಲಾಗುತ್ತದೆ. ಸಾಮೂಹಿಕ ಪಟಾಕಿ ಸುಡುವ ಮೂಲಕ ಜಾರ್ಜ್ ದೊರೆ ಬದುಕುಳಿದ ಸಂಭ್ರಮಾಚರಣೆ ನಡೆಯುತ್ತದೆ. ನಮ್ಮ ಸಂಸತ್ ಭವನದ ಮೇಲೆ ಹೇಗೆ 'ಜೈಶ್ ಎ ಮೊಹಮ್ಮದ್' ಪಂಗಡದ ಧರ್ಮಾಂಧರು ದಾಳಿಗೆ ಬಂದಿದ್ದರೊ ಹಾಗೆಯೇ ಅಲ್ಲಿನ ಸಂಸತ್ತಿನ ದಾಳಿಗೂ ಧರ್ಮಾಂಧತೆಯೇ ಕಾರಣವಾಗಿತ್ತು.

## ಶೀತಲ ದೇವಿ ಈಗ ವಿಶ್ವ ಚಾಂಪಿಯನ್



ಕೈಗಳಿಲ್ಲದೇ ಕಾಶ್ಮೀರದ ರೈತ ಕುಟುಂಬದಲ್ಲಿ ಜನಿಸಿದ ಶೀತಲ ದೇವಿ ಹೆಸರಿನ ಈ ಹುಡುಗಿ ಬಿಲ್ಲುವಿದ್ಯೆಯಲ್ಲಿ ಪಳಗಿ ಚೀನಾ ದೇಶಕ್ಕೆ ಹೋಗಿ ವಿಕಲಚೇತನರ ಏಷ್ಯಮಟ್ಟದ ಸ್ಪರ್ಧೆಯಲ್ಲಿ ಎರಡೆರಡು ಚಿನ್ನದ ಪದಕಗಳನ್ನು ಗೆದ್ದಾಗ ನಾವು 'ಚಿಣ್ಣರ ಚೇತನ'ದಲ್ಲಿ ಅವಳ ಸಾಹಸವನ್ನು ದಾಖಲಿಸಿದ್ದೆವು. ಕಾಲಲ್ಲಿ ಬಿಲ್ಲನ್ನು ಬಾಗಿಸಿ, ಬಾಯಲ್ಲಿ ಹೆದೆಯನ್ನು ಜಗ್ಗಿ, ಗಲ್ಲದಲ್ಲಿ ಬಾಣವನ್ನು ಒತ್ತಿ ಹಿಡಿದು, ಗುರಿ ಹೊಡೆಯುವ ಇವಳು ತನ್ನ 16ನೇ ವಯಸ್ಸಿನಲ್ಲೇ ಅರ್ಜುನ ಪ್ರಶಸ್ತಿಗೆ ಭಾಜನಳಾದವಳು. ಇದೀಗ 18ರ ಯುವತಿ ಶೀತಲ್ ದೇವಿ ವಿಶ್ವಮಟ್ಟದ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಗಳಿಸಿದ್ದಾಳೆ. ಕೈಯೆತ್ತಿ "ಜೈ" ಎನ್ನೋಣ, ಚಪ್ಪಾಳೆ ತಟ್ಟೋಣ.

# ಬಾಳೆಗೆ ಹೊಸ ಬಾಳುವೆ ಕೊಟ್ಟ ಜಿನಾಲಿ ಮೋದಿ





ಬಾಳೆಯ ಎಲೆ, ಹೂವು, ಕಾಯಿ, ಹಣ್ಣು, ನಾರು, ಕಾಂಡ ಎಲ್ಲವನ್ನೂ ಬಳಸುವ ನಾವು ಬಾಳೆಮರವನ್ನೂ ಕಲ್ಪವೃಕ್ಷ ಎನ್ನಬೇಕು. ಆದರೆ ಬಾಳೆಯ ಹೆಚ್ಚಿನ ಎಲ್ಲವನ್ನೂ ನಾವು ಬಳಸಿ ತಿಪ್ಪೆಗೆ ಬಿಸಾಕುತ್ತೇವೆ. ಆ ತ್ಯಾಜ್ಯವನ್ನೇ ಸಂಗ್ರಹಿಸಿ ಪಳಪಳ ಹೊಳೆಯುವ, ದೀರ್ಘ ಬಾಳಿಕೆಯ ರೆಕ್ಸಿನ್ ಹಾಳೆಗಳನ್ನಾಗಿ ಪರಿವರ್ತಿಸಬಹುದು ಎಂದು ಭಾರತೀಯ ಯುವತಿ ಜಿನಾಲಿ ಮೋದಿ (Jinali Mody) ತೋರಿಸಿಕೊಟ್ಟಿದ್ದಾರೆ. ಅವರು ಈ ವರ್ಷ ವಿಶ್ವಸಂಸ್ಥೆಯ 'ಚಾಂಪಿಯನ್ ಆಫ್ ದಿ ಅರ್ಥ್' ಪ್ರಶಸ್ತಿಯನ್ನು ಪಡೆದಿದ್ದಾರೆ. ಮುಂಬೈಯಲ್ಲಿ ಓದಿ, ಅಮೆರಿಕದ ಯೇಲ್ ಸ್ಕೂಲ್‌ನಲ್ಲಿ ಪರಿಸರ ವಿಜ್ಞಾನದ ಪದವಿ ಪಡೆದ ಈಕೆ 'ಬನೋಫಿ' ಕಂಪನಿಯ ಮುಖ್ಯಸ್ಥೆ ಮತ್ತು ಒಡತಿ. 'ಬನೋಫಿ' ಎಂದರೆ ಬನಾನಾ ಫೈಬರ್ 'ಬಾಳೆಯ ನಾರು' ಎಂದರ್ಥ.



ಬಾಳೆಯ ದಿಂಡನ್ನು ಸಂಸ್ಕರಿಸಿ ಪ್ಲಾಸ್ಟಿಕ್‌ಗಿಂತ ಗಟ್ಟಿಮುಟ್ಟಾದ ಹಾಳೆಗಳನ್ನು, ಫ್ಯಾಶನ್ ಬಟ್ಟೆಗಳನ್ನು, ಲೆದರ್ ಉತ್ಪನ್ನಗಳನ್ನು ಜಿನಾಲಿಯ ಕಾರ್ಖಾನೆಯಲ್ಲಿ ತಯಾರಿಸಲಾಗುತ್ತದೆ. ಪ್ರಾಣಿಗಳ ಚರ್ಮದಿಂದ ಲೆದರ್ ತಯಾರಿಸುವಾಗ ಭಾರೀ ಪ್ರಮಾಣದ ಕೆಮಿಕಲ್ ಮಾಲಿನ್ಯ, ಜಲಮಾಲಿನ್ಯ ಉಂಟಾಗುತ್ತದೆ. ಜಿನಾಲಿಯ ಉತ್ಪನ್ನಗಳಲ್ಲಿ ಮಾಲಿನ್ಯದ ಅಂಶವಿಲ್ಲ. ಅಷ್ಟೇ ಅಲ್ಲ, ನೀರಿನ ಅಗತ್ಯವೇ ಶೇ 90ರಷ್ಟು ತಗ್ಗುತ್ತದೆ. ಇಂಥ ಪರಿಸರ-ಸ್ನೇಹಿ ವಸ್ತುಗಳನ್ನು ತಯಾರಿಸುವ ಇವರಿಗೆ ಈಗಾಗಲೇ ಅನೇಕ ಜಾಗತಿಕ ಪ್ರಶಸ್ತಿಗಳು ಲಭಿಸಿವೆ. ಬಾಳೆಯ ದಿಂಡನ್ನು ಜಜ್ಜಿದರೆ ಅದಕ್ಕೆ ''ಪಲ್ಪ್'' (pulp) ಎನ್ನುತ್ತಾರೆ. ಕಲ್ಪವೃಕ್ಷ ಎನಿಸಿದ್ದ ಬಾಳೆ ಜಿನಾಲಿಯ ದೆಸೆಯಿಂದ ಈಗ ಪಲ್ಲವೃಕ್ಷವಾಗಿದೆ.

## ರಾಕೆಟ್ ಮೇಲೆ 'ಲೈಕಾ' ನಿಂತಿದೆ, ಲೈಕ್ ಮಾಡಿ!





1957ರಲ್ಲಿ ಜಗತ್ತಿನ ಮೊದಲ ಉಪಗ್ರಹವನ್ನು ಸೋವಿಯತ್ ರಷ್ಯ ಬಾಹ್ಯಾಕಾಶಕ್ಕೆ ಹಾರಿಸಿತು. ಕೇವಲ ಅರ್ಧ ಮೀಟರ್ ವ್ಯಾಸದ ಆ ಲೋಹದ ಚಂಡು ಬೀಪ್ ಬೀಪ್ ಸದ್ದು ಮಾಡುತ್ತ ಪ್ರತಿ ಒಂದೂವರೆ ಗಂಟೆಗೆ ಭೂಮಿಯನ್ನು ಸುತ್ತುತ್ತಿತ್ತು. ಅಮೆರಿಕವೂ ಪೈಪೋಟಿಗೆ ಬರುತ್ತಿದೆ ಎಂದು ಗೊತ್ತಾಗಿ ರಷ್ಯ ಮತ್ತೆ ಅವಸರ ಮಾಡಿ ಒಂದೇ ತಿಂಗಳ ನಂತರ ನವಂಬರ್ 3ರಂದು ಎರಡನೇ ಉಪಗ್ರಹವನ್ನು ಹಾರಿಸಿತು. ಈ ಬಾರಿ 80 ಸೆಂಟಿಮೀಟರ್‌ನ ತುಸು ದೊಡ್ಡ ಪೆಟ್ಟಿಗೆಯಲ್ಲಿ 'ಲೈಕಾ' ಹೆಸರಿನ ಹೆಣ್ಣು ಬೀದಿ ನಾಯಿಯನ್ನು ಇಡಲಾಗಿತ್ತು. ಸಾಧು ಸ್ವಭಾವದ ಅದಕ್ಕೆ ಟೆಲಿಮೆಟ್ರಿ ಸಾಧನಗಳನ್ನು ಚುಚ್ಚಿ, ಬೆಲ್ಟ್ ಹಾಕಿ ಆ ಇಕ್ಕಟ್ಟಿನಲ್ಲಿ ಕೂರಿಸಲಾಗಿತ್ತು. ತಿನ್ನಲು ಜೆಲ್ಲಿ ಮಾತ್ರೆಗಳನ್ನು ಇಡಲಾಗಿತ್ತು. ಲೈಕಾ ಭೂಮಿಗೆ ಹಿಂದಿರುಗಿ ಬರುವ ಸಾಧ್ಯತೆ ಇರಲಿಲ್ಲ. ಏಳು ದಿನಗಳ ನಂತರ ಅದಕ್ಕೆ ನಿದ್ರೆ ಮಾತ್ರೆ ಕೊಡುವ ವ್ಯವಸ್ಥೆ ಮಾಡಲಾಗಿತ್ತು.

ಮೊದಲ ಬಾರಿಗೆ ಜೀವಂತ ಪ್ರಾಣಿಯನ್ನು ತಾನೇ ಬಾಹ್ಯಾಕಾಶಕ್ಕೆ ಕಳಿಸಿದ್ದೇನೆಂದು ರಷ್ಯ ಬೀಗುತ್ತಿದ್ದಾಗ ಅನೇಕ ದೇಶಗಳ ಪ್ರಾಣಿಪ್ರಿಯರು ಪ್ರತಿಭಟನೆ ನಡೆಸಿದರು. ಅದು ಬದುಕಿದಷ್ಟು ದಿನವೂ ಮೌನ ಆಚರಿಸಲು ಬ್ರಿಟನ್ನಿನಲ್ಲಿ ಕರೆ ಕೊಡಲಾಗಿತ್ತು. ಆದರೆ ಬಡಪಾಯಿ ಲೈಕಾ ಏಳು ದಿನ ಅಲ್ಲ, ಏಳು ಗಂಟೆಗಳಲ್ಲೇ ಅತಿ ಸೆಕೆ, ಅತಿ ಒತ್ತಡದಿಂದಾಗಿ ಪ್ರಾಣ ಬಿಟ್ಟಿತ್ತು. ಮೂರು ತಿಂಗಳ ನಂತರ ಇಡೀ ಉಪಗ್ರಹ ಉರಿದು ಭಸ್ಮವಾಯಿತು. ಇಂದು ಲೈಕಾ ನೆನಪಿಗೆ ಜಗತ್ತಿನಲ್ಲಿ ಎರಡು ಪ್ರತಿಮೆಗಳಿವೆ. ಒಂದು ಪ್ರತಿಮೆ ಮಾಸ್ಕೊದಲ್ಲಿ ಮನುಷ್ಯನ ತಾಂತ್ರಿಕ ಸಾಧನೆಯ ಉತ್ತುಂಗವನ್ನು ತೋರಿಸುತ್ತದೆ; ಇನ್ನೊಂದು ಮನುಷ್ಯನ ನೈತಿಕ ಅಧಃಪತನದ ಸಂಕೇತವಾಗಿ ಶ್ವಾನಪ್ರಿಯರು ನಿಲ್ಲಿಸಿದ ಪ್ರತಿಮೆ ನ್ಯೂಯಾರ್ಕಿನಲ್ಲಿದೆ.

## ಕಾಡಿನ ಕಥೆಗಳಲ್ಲಿ ಬಿರ್ಸಾ ಮುಂಡಾ



ಬ್ರಿಟಿಷರ ವಿರುದ್ಧ ಹೋರಾಡಿದ ಬಿರ್ಸಾ ಮುಂಡಾ ಎಂಬ ಆದಿವಾಸಿ ಶಕಪುರುಷ ಗೊತ್ತೆ? 1875ರಲ್ಲಿ (ಈಗಿನ) ಝಾರ್ಖಂಡ್‌ದ ಕಾಡಿನಲ್ಲಿ ಜನಿಸಿದ ಈತ ಭಾರೀ ಚುರುಕು ಬುದ್ಧಿಯ ಹುಡುಗನಾಗಿದ್ದ. ಅವನ ಕುಟುಂಬವನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸಿ ಬಿರ್ಸಾನನ್ನು ಮಿಶನರಿ ಶಾಲೆಗೆ ಸೇರಿಸಿದ್ದರು. ಹದಿನೆಂಟನೇ ವಯಸ್ಸಿಗೇ ಬಿಲ್ಲುವಿದ್ಯೆಯಲ್ಲಿ ಪಳಗಿದ ಈ ಯುವಕ ತನ್ನವರ ತಂಡ ಕಟ್ಟಿಕೊಂಡು ಮತಾಂತರದ ವಿರುದ್ಧ ಆದಿವಾಸಿಗಳನ್ನು ಸಂಘಟಿಸಿದ. ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಡಿ ಜೈಲು ಪಾಲಾದ. 1900ನೇ ಇಸವಿಯಲ್ಲಿ 25ನೇ ವಯಸ್ಸಿನಲ್ಲಿ ಸೆರೆಮನೆಯಲ್ಲೇ ಈತನ ಪ್ರಾಣ ಹೋಯಿತು. ಸ್ವಾತಂತ್ರ್ಯದ ಬಗ್ಗೆ ದೇಶದಲ್ಲಿ ಜಾಗೃತಿ ಮೂಡುವ ಮೊದಲೇ ಬ್ರಿಟಿಷರ ವಿರುದ್ಧ ಬಿಲ್ಲೆತ್ತಿದ ಈ ಕಾಡಿನ ರಾಜನ ಹೋರಾಟದ ಕೆಚ್ಚು ಸಾಹಸಗಳು ಜಾನಪದ ಹಾಡುಗಳಾದವು. ಅವನ ಜನ್ಮದಿನ ನವಂಬರ್ 15ನ್ನು 'ಝಾರ್ಖಂಡ್ ಪ್ರತಿಷ್ಠಾಪನಾ ದಿನ'' ಎಂದು ಆಚರಿಸುತ್ತಾರೆ. ಕಗ್ಗಾಡಿಗೆ ಸೀಮಿತವಾಗಿದ್ದ ಅವನ ಕಥನವನ್ನು ಪ್ರಧಾನಿ ಮೋದಿಯವರು ರಾಷ್ಟ್ರಮಟ್ಟಕ್ಕೆ ಏರಿಸಿ, ದಿಲ್ಲಿಯಲ್ಲಿ ಅವನ ಪ್ರತಿಮೆಯನ್ನು ಸ್ಥಾಪಿಸಿ ಆ ದಿನವನ್ನು ರಾಷ್ಟ್ರೀಯ ಆದಿವಾಸಿ ಗೌರವ ದಿನ ಎಂದು ಘೋಷಿಸಿದ್ದಾರೆ.

## ಕತ್ತಲ ಕೋಣೆಯ ಕಾಲುಚೀಲಗಳು

ರಮೇಶ ಶಾಲೆಗೆ ಓಡುವ ಅವಸರದಲಿದ್ದಾನೆ. ಕತ್ತಲ ಕಪಾಟಿನ ಬಳಿ ಹೋಗಿ ಒಂದು ಜೋಡಿ ಕಾಲುಚೀಲಕ್ಕೆ ತಡಕಾಡುತ್ತಿದ್ದಾನೆ. ಕಪಾಟಿನಲ್ಲಿ 10 ಕೆಂಪು, 10 ನೀಲಿ, 10 ಕಪ್ಪು ಕಾಲುಚೀಲಗಳಿವೆ. ಅವುಗಳಲ್ಲಿ ಒಂದೇ ಬಣ್ಣದ ಒಂದು ಜೋಡಿ ಕಾಲುಚೀಲ ಸಿಗಬೇಕೆಂದರೆ ಆತ 'ಕನಿಷ್ಠ' ಎಷ್ಟು ಕಾಲುಚೀಲಗಳನ್ನು ಬೆಳಕಿಗೆ ತಂದು ನೋಡಬೇಕು?

(ಮುಂದಿನ ಪುಟದಲ್ಲಿ ಉತ್ತರ ಕೊಡಲಾಗಿದೆ)

## ಮರದ ಕೊಚ್ಚುಮಣೆಯ ಹೆಚ್ಚುಗಾರಿಕೆ



ಅಡುಗೆ ಮನೆಯಲ್ಲಿ ಸೊಪ್ಪು, ತರಕಾರಿ, ಗಡ್ಡೆಗೆಣಸನ್ನು ಕತ್ತರಿಸಲು ಹಿಂದೆಲ್ಲ ಮರದ ಹಲಗೆಗಳು ಬಳಕೆಯಾಗುತ್ತಿದ್ದವು. ಈಗ ಅದಕ್ಕೂ ದಪ್ಪ ಪ್ಲಾಸ್ಟಿಕ್ಕಿನ, ಚಂದದ ಬಣ್ಣದ ನಾನಾ ಆಕಾರದ, ನಯವಾದ ಸಾಧನಗಳು ಬಂದಿವೆ. ಅವಕ್ಕೆ ಗೀರು ಬೀಳುವುದಿಲ್ಲ, ತೊಳೆಯಲು ಸುಲಭ, ಎತ್ತಿಡಲು ಹಗುರ ಎಂಬ ಕಾರಣಕ್ಕೆ ಅನೇಕರು ಅದನ್ನೇ ಖರೀದಿಸಿ ಅಡುಗೆಮನೆಯಲ್ಲಿ ಬಳಸುತ್ತಾರೆ. ಆದರೆ ಮರದ ಹಲಗೆಯೇ ಶ್ರೇಷ್ಠ ಎಂದು ವಿಜ್ಞಾನಿಗಳು ವಾದಿಸುತ್ತಾರೆ. ಪ್ಲಾಸ್ಟಿಕ್ ಹಲಗೆಯನ್ನು ಬಳಸಿ ನೀವು ಚೊಕ್ಕಟ ತೊಳೆಯದೇ ಇದ್ದರೆ ಅದರ ಮೇಲೆ ಏಕಾಣು ಜೀವಿಗಳು ಬೆಳೆಯುತ್ತವೆ. ಆರೋಗ್ಯಕ್ಕೆ ಅದು ಒಳ್ಳೆಯದಲ್ಲ. ಆದರೆ ಮರದ ಹಲಗೆಯ ಮೇಲೆ ಹಾಗೆಲ್ಲ ಬ್ಯಾಕ್ಟೀರಿಯಾ ಸುಲಭಕ್ಕೆ ಬೆಳೆಯಲು ಸಾಧ್ಯ ಇಲ್ಲ. ಏಕೆಂದರೆ ಕೋಟ್ಯಂತರ ವರ್ಷಗಳಿಂದ ವಿಕಾಸಗೊಂಡಿರುವ ವೃಕ್ಷಗಳು ತಮ್ಮ ಅಂಗಾಂಶದಲ್ಲಿ ಮತ್ತು ಜೀವಕೋಶಗಳಲ್ಲಿ ಅಂಥ ಏಕಾಣುಜೀವಿಗಳನ್ನು ದೂರ ಇಡುವ ಜೀವರಸವನ್ನು ಉತ್ಪಾದಿಸುವುದನ್ನು ಕಲಿತಿವೆ. ಮರಗಳ ಬಲಿತ ಕಾಂಡಗಳು ಒಣಗಿ ಎಷ್ಟೇ ವರ್ಷ ಕಳೆದರೂ ಜೀವಾಣುಗಳನ್ನು ತಡೆಗಟ್ಟುವ ಗುಣ ಇದ್ದೇ ಇರುತ್ತದೆ. ನೀವು ಅಂಥ 'ಕೊಚ್ಚುಮಣೆ'ಯನ್ನು ಈಗಾಗಲೇ ಮೂಲೆಗೆ ಎಸೆದಿದ್ದರೆ ಅದನ್ನು ಅಡುಗೆ ಮನೆಗೆ ಮತ್ತೆ ಕರೆತನ್ನಿ. ಅದನ್ನು ಒದಗಿಸಿದ ವೃಕ್ಷಮಾತೆಗೆ ಜೈ ಎನ್ನಿ.

## ವೀಗನ್ ಆಹಾರದಲ್ಲಿ ಜೇನುತುಪ್ಪವೂ ವರ್ಜ್ಯ ಏಕೆ?




ವೀಗನ್ ಆಹಾರದಲ್ಲಿ ಜೇನುತುಪ್ಪವೂ ವರ್ಜ್ಯ ಏಕೆ? ಸಸ್ಯಾಹಾರಿಗಳು ಮತ್ತು ಮಾಂಸಾಹಾರಿಗಳಿಗಿಂತ ಭಿನ್ನವಾದ ಇನ್ನೊಂದು ವರ್ಗವಿದೆ: ಚಲಿಸುವ ಜೀವಿಗಳಿಗೆ ತೊಂದರೆ ಕೊಟ್ಟು ಪಡೆಯುವ ಯಾವುದೇ ಆಹಾರವನ್ನೂ ಅವರು ಸೇವಿಸುವುದಿಲ್ಲ. ಅಂಥವರಿಗೆ 'ವೀಗನ್ಸ್'' (ವಿಶೇಷ ಶಾಕಾಹಾರಿಗಳು) ಎನ್ನುತ್ತಾರೆ. ಅವರಿಗೆ ಹಾಲು, ಮೊಸರು, ಬೆಣ್ಣೆ, ಗಿಣ್ಣದಂಥ ಹೈನು ಉತ್ಪಾದನೆಗಳೂ ವರ್ಜ್ಯ; ಅವರು ಜೇನುತುಪ್ಪವನ್ನೂ ಸೇವಿಸುವುದಿಲ್ಲ.

(ಉತ್ತರ: 4 ಕಾಲುಚೀಲಗಳು. ರಮೇಶ ಒಂದೊಂದು ಬಣ್ಣದ ಮೂರು ಕಾಲುಚೀಲಗಳನ್ನು ಹೆಕ್ಕಿದರೂ ನಾಲ್ಕನೆಯದು ಯಾವುದೋ ಒಂದರ ಬಣ್ಣಕ್ಕೆ ಹೋಲಿಕೆ ಆಗಲೇಬೇಕು ತಾನೆ?)

# ರಾಣಿ ದಿದ್ದಾ - ಕಾಶ್ಮೀರದ ಶೂರ ಮತ್ತು ಜಾಣ್ಮೆಯ ಆಡಳಿತಗಾರ್ತಿ

ವ್ಯಕ್ತಿ ವಿಶೇಷ ಮಾಲಿಕೆ

ಇತಿಹಾಸವು ಅನೇಕ ಶಕ್ತಿಶಾಲಿ ಪುರುಷ ಆಡಳಿತಗಾರರನ್ನು ದಾಖಲಿಸಿರುವಂತೆಯೇ, ಕೆಲವೇ ಕೆಲವು ಮಹಿಳೆಯರು ತಮ್ಮ ರಾಜಕೀಯ ಬುದ್ಧಿವಂತಿಕೆ, ಧೈರ್ಯ ಮತ್ತು ತ್ಯಾಗದ ಮೂಲಕ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಅವರಲ್ಲಿ ಕಾಶ್ಮೀರದ ರಾಣಿ ದಿದ್ದಾ ಒಂದು ವಿಶಿಷ್ಟ ವ್ಯಕ್ತಿತ್ವ. ಕ್ರಿ.ಶ. 958 ರಿಂದ 1003 ರವರೆಗೆ ಕಾಶ್ಮೀರವನ್ನು ಆಳಿದ ದಿದ್ದಾ ಅವರು ಕೇವಲ ರಾಜಮಾತೆಯಷ್ಟೇ ಅಲ್ಲ, ಬಲಿಷ್ಠ ಮತ್ತು ಪ್ರಜ್ಞಾವಂತ ಆಡಳಿತಗಾರ್ತಿಯಾಗಿದ್ದರು.

ರಾಣಿ ದಿದ್ದಾ ಅವರು ಲೋಹಾರ ರಾಜ್ಯದ ರಾಜಕುಮಾರಿಯಾಗಿದ್ದರು. ಅವರ ತಂದೆ ಸಿಂಹರಾಜ ಮತ್ತು ತಾಯಿ ಕಾಶ್ಮೀರದ ರಾಜಕುಮಾರಿಯವರಾಗಿದ್ದರು. ರಾಜಕೀಯವಾಗಿ ಸಮೃದ್ಧ ಕುಟುಂಬದಲ್ಲಿ ಹುಟ್ಟಿದ ದಿದ್ದಾ ಬಾಲ್ಯದಿಂದಲೇ ನಾಯಕತ್ವದ ಗುಣಗಳನ್ನು ಪ್ರದರ್ಶಿಸುತ್ತಿದ್ದರು. ಅವರು ಕಾಶ್ಮೀರದ ರಾಜ ಕ್ಷೇಮಗುಪ್ತರನ್ನು ವಿವಾಹವಾದರು. ವಿವಾಹದ ನಂತರ ಅವರು ಕಾಶ್ಮೀರದ ರಾಣಿಯಾಗಿ ಪ್ರಜೆಗಳ ಮನಸ್ಸು ಗೆದ್ದರು.

ರಾಜ ಕ್ಷೇಮಗುಪ್ತರ ನಿಧನದ ನಂತರ, ಅವರ ಮಗ ಅಭಿಮನ್ಯು ಅಲ್ಪವಯಸ್ಸಿನವನಾಗಿದ್ದರಿಂದ, ದಿದ್ದಾ ಅವರು ರಾಜಮಾತೆಯಾಗಿ ಆಡಳಿತ ನಡೆಸಲು ಪ್ರಾರಂಭಿಸಿದರು. ಅಭಿಮನ್ಯು ನಿಧನವಾದ ನಂತರ, ಅವರ ಮೊಮ್ಮಕ್ಕಳು ಕ್ರಮವಾಗಿ ಸಿಂಹಾಸನಕ್ಕೇರಿದರು. ಆದರೆ ಅವರ ಅಸಮರ್ಥ ಆಡಳಿತದ ಹಿನ್ನೆಲೆ, ದಿದ್ದಾ ಅವರು ರಾಜ್ಯದ ಸ್ಥಿರತೆಗಾಗಿ ಸ್ವತಃ ಆಡಳಿತದ ಹೊಣೆ ಹೊತ್ತರು.

ರಾಣಿ ದಿದ್ದಾ ಅವರ ಆಡಳಿತವನ್ನು ಕಾಶ್ಮೀರದ ಇತಿಹಾಸದಲ್ಲಿ ಸುವರ್ಣಯುಗವೆಂದು ಪರಿಗಣಿಸಲಾಗುತ್ತದೆ. ಅವರು ರಾಜಕೀಯವಾಗಿ ಬಲಿಷ್ಠಳಾಗಿದ್ದು, ಆಂತರಿಕ ಬಂಡಾಯಗಳು ಮತ್ತು ಬಾಹ್ಯ ಹಸ್ತಕ್ಷೇಪಗಳನ್ನು ಶಾಂತವಾಗಿ ನಿರ್ವಹಿಸಿದರು. ದಿದ್ದಾ ಅವರು ಕಾನೂನು ಮತ್ತು ಶಿಸ್ತಿನ ಪ್ರಭಾವವನ್ನು ಬಲಪಡಿಸಿದರು; ಪ್ರಜಾಪ್ರಿಯತೆ, ನ್ಯಾಯ ಮತ್ತು ನಿರ್ಣಯಾತ್ಮಕ ಚಿಂತನೆಗಳಲ್ಲಿ ಮಾದರಿಯಾಗಿದ್ದರು. ಅವರ ಆಡಳಿತದಲ್ಲಿ ಕಾಶ್ಮೀರವು ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಬೆಳವಣಿಗೆಯ ಹಾದಿಯಲ್ಲಿ ನಡೆಯಿತು. ಕಲೆ, ಸಾಹಿತ್ಯ ಮತ್ತು ಧಾರ್ಮಿಕ ಚಟುವಟಿಕೆಗಳು ಉತ್ತೇಜಿತವಾದವು.



ರಾಣಿ ದಿದ್ದಾ ಅವರು ದಿಟ್ಟ ಮತ್ತು ದೃಢ ಮನೋಭಾವದ ನಾಯಕಿ. ಅವರು ವಿರೋಧಿಗಳನ್ನು ಎದುರಿಸುವಲ್ಲಿ ಧೈರ್ಯ ತೋರಿದರು ಮತ್ತು ರಾಜ್ಯದ ಹಿತವನ್ನು ಯಾವಾಗಲೂ ಮೊದಲಿಗೇ ಇಟ್ಟರು. ಇತಿಹಾಸಕಾರ ಕಲ್ಹಣ ತಮ್ಮ ಪ್ರಸಿದ್ಧ ಕೃತಿ ರಾಜತರಂಗಿಣಿಯಲ್ಲಿ ದಿದ್ದಾ ಅವರನ್ನು "ಅತ್ಯಂತ ಬಲಿಷ್ಠ ಮತ್ತು ಜಾಣ್ಮೆಯ ಮಹಿಳಾ ಆಡಳಿತಗಾರ್ತಿ" ಎಂದು ಕೊಂಡಾಡಿದ್ದಾರೆ. ಅವರಲ್ಲಿ ರಾಜಕೀಯ ಜಾಣ್ಮೆ, ಆಡಳಿತದ ಪ್ರೌಢತೆ ಮತ್ತು ನ್ಯಾಯಬುದ್ಧಿ ಅಪರೂಪದ ಸಂಯೋಜನೆಯಾಗಿತ್ತು.

ಕ್ರಿ.ಶ. 1003ರಲ್ಲಿ ರಾಣಿ ದಿದ್ದಾ ನಿಧನರಾದರು. ಅವರ ನಂತರ ಲೋಹಾರ ವಂಶದ ಆಡಳಿತ ಮುಂದುವರಿಯಿತು. ಇಂದಿಗೂ ಕಾಶ್ಮೀರದ ಇತಿಹಾಸದಲ್ಲಿ ದಿದ್ದಾ ಅವರನ್ನು "ಕಾಶ್ಮೀರದ ಕ್ಲಿಯೋಪಾತ್ರಾ" ಎಂದು ಗೌರವದಿಂದ ಸ್ಮರಿಸಲಾಗುತ್ತದೆ.

# ಡಾ. ಎಸ್. ಎಲ್. ಭೈರಪ್ಪ – ಸಾಹಿತ್ಯದ ಶಾಶ್ವತ ಪ್ರೇರಣೆ



ಭಾರತೀಯ ಸಾಹಿತ್ಯ ಲೋಕದಲ್ಲಿ ಅಳಿಯದ ಗುರುತು ಮೂಡಿಸಿದ ಅಪ್ರತಿಮ ಸಾಹಿತಿ ಡಾ. ಎಸ್. ಎಲ್. ಭೈರಪ್ಪ ಅವರು ಕೇವಲ ಕಾದಂಬರಿಕಾರರಲ್ಲ, ತತ್ತ್ವಚಿಂತಕರೂ, ಸಮಾಜದ ಆಂತರ್ಯವನ್ನು ತಲುಪಿದ ಸತ್ಯಸಂಧ ಬರಹಗಾರರೂ ಆಗಿದ್ದಾರೆ. ಅವರ ಕೃತಿಗಳು ಕನ್ನಡ ಸಾಹಿತ್ಯದ ಪರಿಧಿಯನ್ನು ಮೀರಿ ದೇಶದ ವಿವಿಧ ಭಾಷೆಗಳಲ್ಲಿ ಓದುಗರ ಹೃದಯ ಗೆದ್ದಿವೆ.

ಕಾದಂಬರಿಯ ಹಿಂದೆ ಅಡಗಿರುವ ಅವರ ಸಂಶೋಧನಾ ಶ್ರಮ, ಸ್ಥಳಾಧ್ಯಯನ ಜನಜೀವನದ ನೇರ ಅನುಭವ – ಇವೆಲ್ಲವೂ ಅವರ ಸಾಹಿತ್ಯದ ಜೀವಾಳ. ಸಮಾಜದ ವಾಸ್ತವತೆ, ಮಾನವ ಸಂಬಂಧಗಳ ಸಂಕೀರ್ಣತೆ, ತಾತ್ವಿಕ ಚಿಂತನೆಗಳು ಇವೆಲ್ಲವನ್ನು ಅವರು ಸಾಹಿತ್ಯದ ಲೋಕಕ್ಕೆ ತಂದರು. ಅವರ ಸಾಹಿತ್ಯ ಕೇವಲ ಕಲಾತ್ಮಕ ಅಭಿವ್ಯಕ್ತಿ ಅಲ್ಲ, ಅದು ಸಂಸ್ಕೃತಿಯ ಪ್ರತಿಬಿಂಬ ಮತ್ತು ರಾಷ್ಟ್ರಭಾವನೆಯ ಪ್ರೇರಕ ಶಕ್ತಿ.

ಅದಮ್ಯ ಚೇತನ ಸಂಸ್ಥೆಯ ಸೇವಾ ಚಟುವಟಿಕೆಗಳ ಬಗ್ಗೆ ಸ್ವತಃ ಆಸಕ್ತಿ ತೋರಿದ ಭೈರಪ್ಪ ಅವರು, ಗವಿಪುರಂನಲ್ಲಿರುವ ನಮ್ಮ ಕಚೇರಿಗೆ ಬಂದು ಕಾರ್ಯಗಳ ಬಗ್ಗೆ ತಿಳಿದುಕೊಂಡು ಅಪಾರ ಸಂತೋಷ ವ್ಯಕ್ತಪಡಿಸಿದ್ದರು. ಶ್ರೀ ಅನಂತಕುಮಾರ್ ಅವರೊಡನೆ ಕಳೆದ ಕ್ಷಣಗಳನ್ನು ಅವರು ಮೆಲುಕು ಹಾಕಿ, ಅವರ ರಾಷ್ಟ್ರಭಾವನೆಯನ್ನು ಶ್ಲಾಘಿಸಿದ್ದರು.

ಸಾಹಿತ್ಯದ ಮೂಲಕ ಲಕ್ಷಾಂತರ ಓದುಗರ ಮನ ಗೆದ್ದರೂ, ಭೈರಪ್ಪನವರ ಹೃದಯ ಯಾವಾಗಲೂ ಸಮಾಜದ ನೋವಿನ ಕಡೆ ತಿರುಗಿ ನಿಂತಿತ್ತು. ಬಾಲ್ಯದಲ್ಲಿ ಬಡತನದ ಕಹಿ ಅನುಭವಿಸಿದ ಅವರು, ಬಡ ವಿದ್ಯಾರ್ಥಿಗಳ ಕಷ್ಟವನ್ನು ಆಳವಾಗಿ ಅರ್ಥಮಾಡಿಕೊಂಡಿದ್ದರು. ಇದೇ ಮನೋಭಾವದಿಂದ, ಅವರಿಂದಲೇ ಎಸ್. ಎಲ್. ಭೈರಪ್ಪ ಟ್ರಸ್ಟ್ ಸ್ಥಾಪನೆಗೊಂಡಿತು — ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ನೆರವು ನೀಡುವ ಈ ಯೋಜನೆ ಅವರ ಮಾನವೀಯತೆಗೆಯ ಜೀವಂತ ನಿದರ್ಶನವಾಗಿದೆ.

ಈ ಟ್ರಸ್ಟ್ ಸ್ಥಾಪನೆಯ ಸಂದರ್ಭದಲ್ಲಿಯೇ ನನಗೆ ಅವರೊಂದಿಗೆ ಹತ್ತಿರದ ಸಂಪರ್ಕ ದೊರಕಿತು. ನನ್ನನ್ನು ಟ್ರಸ್ಟಿಯಾಗಿ ಸೇರಿಸಿಕೊಂಡು, ಸರ್ಕಾರಿ ಶಾಲೆಗಳ ಸುಧಾರಣೆ ಕುರಿತು ಉತ್ಸಾಹದಿಂದ ಚರ್ಚಿಸಿದ್ದರು. ತಮ್ಮ ಪ್ರವಾಸಗಳ ಅನುಭವ, ನೆನಪುಗಳು, ಮತ್ತು ತಾತ್ವಿಕ ಚಿಂತನೆಗಳನ್ನು ಹಂಚಿಕೊಳ್ಳುವ ವೇಳೆ ಅವರ ಸ್ಮರಣಾಶಕ್ತಿ ಮತ್ತು ಉತ್ಸಾಹ ಕಣ್ತುಂಬುವಂತಿತ್ತು. ಸಾಹಿತ್ಯಾಸಕ್ತರೊಂದಿಗೆ ಮಾತುಕತೆ ನಡೆಸುವಾಗ ಅವರ ಕಣ್ಣಲ್ಲಿ ಹೊಳೆಯುತ್ತಿದ್ದ ಉತ್ಸಾಹ, ಜೀವನದ ಪ್ರತಿಯೊಂದು ಕ್ಷಣಕ್ಕೂ ಅರ್ಥ ತುಂಬುತ್ತಿದ್ದ ಶಕ್ತಿ, ನಮ್ಮೆಲ್ಲರಿಗೂ ಶಾಶ್ವತ ಪ್ರೇರಣೆಯಾಗಿದೆ.ಡಾ. ಎಸ್. ಎಲ್. ಭೈರಪ್ಪ ಅವರ ಸರಳ ಜೀವನ, ತೀಕ್ಷ್ಣ ಚಿಂತನೆ ಮತ್ತು ರಾಷ್ಟ್ರಹಿತಾಸಕ್ತಿಯ ದೃಷ್ಟಿಕೋನವು ಮುಂದಿನ ಪೀಳಿಗೆಗಳಿಗೂ ದಾರಿದೀಪವಾಗಲಿದೆ.



ಡಾ. ಎಸ್. ಎಲ್. ಭೈರಪ್ಪ ಅಗಲಿಕೆಗೆ ಅದಮ್ಯ ಚೇತನ ಸಂಸ್ಥೆ ಮತ್ತು ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇವೆ.

**-ಶ್ರೀಮತಿ ತೇಜಸ್ವಿನಿ ಅನಂತಕುಮಾರ್**

## ಶ್ರದ್ಧಾಂಜಲಿ



ಕನ್ನಡ ನಾಟಕ ಲೋಕದ ಹೆಮ್ಮೆಯ ಪ್ರತಿಭೆ, ಪ್ರಸಿದ್ಧ ನಾಟಕಕಾರ, ನಿರ್ದೇಶಕ ಹಾಗೂ ನಟರಾದ ಯಶವಂತ ಸರದೇಶಪಾಂಡೆ ಅವರ ಅಗಲಿಕೆಯುಕನ್ನಡರಂಗಭೂಮಿ ಮತ್ತು ಸಂಸ್ಕೃತಿಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ.

ಶಾಲಾ ದಿನಗಳಲ್ಲಿ ಡಿಬೇಟರ್ ಆಗಿ, ಎಬಿವಿಪಿ ಯಲ್ಲಿ ಚುರುಕಿನ ಕಾರ್ಯಕರ್ತರಾಗಿ, ಪ್ರತಿ ಚುನಾವಣೆಯ ಸಂದರ್ಭದಲ್ಲೂ ಹೊಸದೇನೋ ಪ್ರಚಾರದ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ, ಅನಂತಕುಮಾರ್‌ರ ಜೀವನಚರಿತೆಯನ್ನು ಅಚ್ಚುಕಟ್ಟಾಗಿ ಪುಸ್ತಕ ರೂಪದಲ್ಲಿ ಹೊರತರುವಲ್ಲಿ — ಹೀಗೆ ಅವರ ಕೊಡುಗೆ ಅಪಾರ. ಅವರು ಪ್ರಾರಂಭಿಸಿದ ಕೇಂದ್ರದಲ್ಲಿ ಅನಂತ್ ರಂಗ ಎಂಬ ಥೇಟರ್ ಸಹ ಕಟ್ಟಿದ್ದಾರೆ.

ಅವರ ನಗುಮುಖ, ಸರಳತೆ, ಮತ್ತು ನಾಟಕದ ಬಗ್ಗೆ ಇರುವ ಶ್ರದ್ಧೆ ಎಲ್ಲರ ಮನದಲ್ಲೂ ಅಚ್ಚಳಿಯದ ಗುರುತು ಬಿಟ್ಟಿದೆ. ಯಶವಂತ ಸರದೇಶಪಾಂಡೆ ಅವರ ಅಗಲಿಗೆ ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ಶ್ರದ್ಧಾಂಜಲಿ ಸಲ್ಲಿಸುತ್ತೇವೆ.

## ಬುಕ್ ಮಾರ್ಕ



# ಅನಂತ ನಮನ -66




**ಹುಬ್ಬಳ್ಳಿ:** ಅನಂತಕುಮಾರ್ ಅವರ 66 ನೇ ಜನ್ಮದಿನದ ಅಂಗವಾಗಿ, ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ 'ಅನಂತ ಸ್ಮರಣೆ ಅನಂತ ಪ್ರೇರಣೆ' ಎಂಬ ವಿಶೇಷ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. ಶ್ರೀಮತಿ ವೈಶಾಲಿ ಘೋರೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ವಿಶೇಷ ಕಾರ್ಯಕ್ರಮದ ಮುಖ್ಯ ಭಾಗವಾಗಿ, ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಆದರ್ಶ ಶಿಕ್ಷಕರನ್ನು ಗೌರವಿಸಲಾಯಿತು. ಚಿನ್ಮಯ್ ಸ್ಕೂಲ್‌ನ ಶ್ರೀಮತಿ ವಿನುತಾ ಕುಲಕರ್ಣಿ, ರೋಟರಿ ಹೈಸ್ಕೂಲ್‌ನ ಶ್ರೀಮತಿ ಸವಿತಾ ಕುಲಕರ್ಣಿ, ಚಿನ್ಮಯ್ ಹೈಸ್ಕೂಲ್‌ನ ಶ್ರೀಮತಿ ರತ್ನಾ ಕುಲಕರ್ಣಿ, ಮತ್ತು ಸಿಟಿ ಸ್ಕೂಲ್‌ನ ಶ್ರೀಮತಿ ಶೈಲಾ ಗೌರಿ, ಮತ್ತು ಶ್ರೀ ಎಸ್ ಬೊಮ್ಮನಗೌಡ ಅವರಿಗೆ ಸನ್ಮಾನ ಮಾಡಿ, ಅವರ ಶೈಕ್ಷಣಿಕ ಸೇವೆಯನ್ನು ಗುರುತಿಸಿ ಗೌರವಿಸಲಾಯಿತು.



**ಹುಬ್ಬಳ್ಳಿ:** ದಿವಂಗತ ಶ್ರೀ ಅರುಣ ಮೋಡಕ್ ಅವರ ಸ್ಮರಣಾರ್ಥವಾಗಿ, ಅನಂತ ಪ್ರೇರಣಾ ಕೇಂದ್ರ, ಸುನಿಧಿ ಕಲಾ ಸೌರಭ (ಹುಬ್ಬಳ್ಳಿ) ಮತ್ತು ರೋಟರಿ ಕ್ಲಬ್ ಪೂರ್ವ (ಹುಬ್ಬಳ್ಳಿ) ಸಂಸ್ಥೆಗಳ ಸಹಯೋಗದೊಂದಿಗೆ 2025ರ ಅಕ್ಟೋಬರ್ 4 ರಿಂದ 7 ರ ವರೆಗೆ ನಾಲ್ಕು ದಿನಗಳ 'ಆಕಾಶ ಬುಟ್ಟಿ ತಯಾರಿಕಾ ಶಿಬಿರ'ವನ್ನು ವಿಶಿಷ್ಟ ಶಿಬಿರವನ್ನು ಆಯೋಜಿಸಲಾಗಿತ್ತು.

ವಿಶೇಷವಾಗಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪರಿಸರ ಸ್ನೇಹಿ ಮತ್ತು ಸಾಂಪ್ರದಾಯಿಕ ಕಲೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ 'ಆಕಾಶ ಬುಟ್ಟಿ' (ಗೂಡುದೀಪ) ತಯಾರಿಕಾ ಶಿಬಿರವು ಹೆಚ್ಚು ಮಹತ್ವ ಪಡೆದಿತ್ತು. ನಾಲ್ಕು ದಿನಗಳ ಈ ಕಾರ್ಯಾಗಾರದಲ್ಲಿ ಶಿಬಿರಾರ್ಥಿಗಳಿಗೆ ಸಾಂಪ್ರದಾಯಿಕ ಬಿದಿರು ಕಡ್ಡಿಗಳು ಮತ್ತು ಬಣ್ಣದ ಹಾಳೆಗಳನ್ನು ಬಳಸಿ ವಿವಿಧ ವಿನ್ಯಾಸದ ಮತ್ತು ಆಕರ್ಷಕ ಆಕಾಶ ಬುಟ್ಟಿಗಳನ್ನು ತಯಾರಿಸುವ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಯಿತು. ಆಸಕ್ತರಿಗೆ ಕರಕುಶಲ ಕಲೆಯ ಅರಿವು ಮತ್ತು ಸೃಜನಾತ್ಮಕತೆಯನ್ನು ಹೆಚ್ಚಿಸುವ ಸಲುವಾಗಿ ಆಯೋಜಿಸಿದ್ದ ಈ ಶಿಬಿರದಲ್ಲಿ ಒಟ್ಟು 25 ಶಿಬಿರಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ, ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು.

# ತಿಂಗಳ ವರದಿ

**( ಸೆಪ್ಟೆಂಬರ್ - ಅಕ್ಟೋಬರ್ )**

## ಶ್ರದ್ಧೆಯ ಶಿಲ್ಪ :

ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6:10ಕ್ಕೆ ಮೈಸೂರು ಆಕಾಶವಾಣಿಯಿಂದ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್ ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ. ಪುರಾತನ ದೇವಾಲಯಗಳನ್ನು ಪರಿಚಯಿಸುವ ಈ ಸರಣಿಯಲ್ಲಿ ಈ ತಿಂಗಳು ತುಮಕೂರು ಜಿಲ್ಲೆಯ ಮಿಡಿಗೇಶಿ ದೇವಾಲಯ, ಕೋಲಾರ ಜಿಲ್ಲೆಯ ಕ್ಯಾಸಂಬಳ್ಳಿಯ ಸ್ವಯಂಭೂ ಶಿವ ದೇವಾಲಯ, ಚಿಕ್ಕಮಗಳೂರು ಜಿಲ್ಲೆಯ ಬ್ರಹ್ಮಸಮುದ್ರದ ದೇವಾಲಯವನ್ನು ಪರಿಚಯಿಸಲಾಯಿತು.

**ಹಸಿರು ಭಾನುವಾರ:** ಹಸಿರು ಭಾನುವಾರ: ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 509 ರಿಂದ 512ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು. 509, 510, 511, ಮತ್ತು 512 ಹಸಿರು ಭಾನುವಾರಗಳನ್ನು ಕ್ರಮವಾಗಿ, ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಪಿಲ್ಲಗಾನಗಳ್ಳಿ ಹಿಂದು ರುದ್ರಭೂಮಿಯ ಆವರಣ, ಬೆಂಗಳೂರಿನ ಬಿ ಪಿ ವಾಡಿಯಾ ರಸ್ತೆಯ ಅನಂತವನದ ಆವರಣ, ಯಶವಂತಪುರದ ರಾಜಾ ಇಂಡಸ್ಟ್ರಿಯಲ್ ಎಸ್ಟೇಟ್ ರಾಷ್ಟ್ರೀಯ ಕೌಶಲ್ಯ ತರಬೇತಿ ಸಂಸ್ಥೆಯ ಆವರಣ, ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಪಿಲ್ಲಗಾನಗಳ್ಳಿ ಹಿಂದು ರುದ್ರಭೂಮಿಯ ಆವರಣದಲ್ಲಿ ನಡೆಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಯುತ್ ಫಾರ್ ಸೇವಾ ಸಂಸ್ಥೆಯ ಕಾರ್ಯಕರ್ತರು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.



## ನಿತ್ಯ ಅನ್ನದಾನ

ಅದಮ್ಯಚೇತನದ ವತಿಯಿಂದ ಬೆಂಗಳೂರಿನ ವಿವಿಧ ಬಡಾವಣೆಯಲ್ಲಿ ನಿತ್ಯ ಅನ್ನದಾನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದ್ದು, ಗವಿಪುರ, ನಗರ್ತಪೇಟೆ, ಮಾರೇನಹಳ್ಳಿ, ಜಯನಗರ, ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಹಲಸೂರು ಅನಂತ ಸ್ಮೃತಿ ವನ (ಲಾಲ್ಬಾಗ್) ಮೊದಲಾದ ಕಡೆಗಳಲ್ಲಿ ಅಗತ್ಯವಿರುವ ಜನರು ರುಚಿಕರವಾದ ಭೋಜನಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇದಲ್ಲದೆ ಅಯೋಧ್ಯೆ ಮತ್ತು ಕಲಬುರಗಿ, ಹುಬ್ಬಳ್ಳಿ ನಗರಗಳಲ್ಲಿಯೂ ಸಹ ಅನ್ನದಾನ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ. ಶ್ರೀಚೇತನ ಸಭೆ, 32 ಕಡೆ ಪ್ಲೇಟ್ ಬ್ಯಾಂಕ್, 10 ಕೇಂದ್ರ ಗಳಿಂದ ಉಚಿತ ಭೋಜನ ವಿತರಣೆ ಆದಿಯಾಗಿ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

ಅನಂತಪಥ

Published by: Tejaswini Ananthkumar
Inputs : Nagesh Hegade | T S Gopal | Poornaprajna
ACknowldegements: Raghupati Sringeri
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ

# ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )









ಪಂಚತತ್ವ ಕರ್ನಾಟಕದ ನೃತ್ಯ' ಸಮನ್ವಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದ್ದರು.

ಶ್ರೀಕೃಷ್ಣವಾದಿರಾಜ ಪ್ರತಿಷ್ಠಾನ ಆಯೋಜಿಸಿದ್ದ "ಪ್ರತಿಭಾ ಪುರಸ್ಕಾರ ಹಾಗೂ ಸಾಧಕರ ಸನ್ಮಾನ" ಕಾರ್ಯಕ್ರಮದಲ್ಲಿ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರನ್ನು ಅವರ ಸಮಾಜಸೇವಾ ಕಾರ್ಯಗಳಿಗೆ ಗೌರವಿಸಲಾಯಿತು.

ಅಕ್ಟೋಬರ್ 18ರಂದು ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಪೇಜಾವರ ಮಠಾಧೀಶರಾದ ಶ್ರೀ ಶ್ರೀ 1008 ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ ಅನುಗ್ರಹ ಮತ್ತು ಆದೇಶದಂತೆ ಗೋವತ್ಸ ದ್ವಾದಶಿ ಪ್ರಯುಕ್ತ ನಡೆದ ಗೋ ತುಲಾಭಾರ ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದರು.







ಸೆಪ್ಟೆಂಬರ್ 22 ರಂದು ಅನಂತ ಸ್ಮರಣೆ- ಅನಂತ ಪ್ರೇರಣೆ ಕಾರ್ಯಕ್ರಮದಲ್ಲಿ ವಿವಿಧ ಗಣ್ಯರು ಭಾಗಿಯಾಗಿ ಅನಂತಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಸಮರ್ಪಿಸಿದರು.







ಹುಬ್ಬಳ್ಳಿಯ ಶ್ರೀ ಈಶ್ವರ ದೇವಸ್ಥಾನದ ಆವರಣದಲ್ಲಿ ಅದಮ್ಯ ಚೇತನದಿಂದ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದೆ.

ಅದಮ್ಯ ಚೇತನದ ಹಸಿರು ಭಾನುವಾರ 512ನೇ ಹಸಿರು ಭಾನುವಾರ ಕಾರ್ಯಕ್ರಮ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಪಿಲ್ಲಗಾನಗಳ್ಳಿ ಹಿಂದು ರುದ್ರಭೂಮಿಯ ಆವರಣದಲ್ಲಿ ಯಶಸ್ವಿಯಾಗಿ ಜರುಗಿತು.

# ಅನಂತ ಚಿತ್ರಸಂಪುಟ

**ಬಿಹಾರ, ಝಾರ್ಖಂಡ್, ಛತ್ತೀಸ್ ಘಡ್ ಮತ್ತು ಮಧ್ಯಪ್ರದೇಶಗಳಲ್ಲಿ ಪಕ್ಷದ ಪ್ರಭಾರಿಯಾಗಿ ಕೆಲಸ ಮಾಡಿದ ಅನಂತಕುಮಾರ್ ಅವರು, ಹುದ್ದೆಗಿಂತಲೂ ಸಂಘಟನೆಯೇ ಸಾರ್ವಭೌಮತ್ವ ಎಂದು ನಂಬಿದ್ದರು. ಸಭೆ, ಭಾಷಣಗಳಿಂದಲ್ಲ ಕಣಕ್ಕಿಳಿದು ಝಾರ್ಖಂಡ್‌ನಲ್ಲಿ ಬೈಕ್ ಯಾತ್ರೆಗಳ ಮೂಲಕ ಹಳ್ಳಿಹಳ್ಳಿಗೆ ತೆರಳಿ ಕಾರ್ಯಕರ್ತರ ಮನ ಗೆದ್ದರು ಮತ್ತು ಜನರಿಂದ ವಿಶ್ವಾಸವನ್ನು ಸಂಪಾದಿಸಿದರು. ಅವರ ಈ ಕಾರ್ಯಶೈಲಿಯು ತಾತ್ಕಾಲಿಕ ಯಶಸ್ಸಿಗಿಂತ ಹೆಚ್ಚಾಗಿ ಶಾಶ್ವತ ಸಂಘಟನಾ ರಚನೆಯನ್ನು ನಿರ್ಮಿಸುವ ದೂರದೃಷ್ಟಿಯ ರಾಜಕಾರಣಕ್ಕೆ ಮಾದರಿಯಾಗಿದೆ.**











